ನವೆಂಬರ್ – 2012

ಅಂತರರಾಷ್ಟ್ರೀಯ
ಸಹಕಾರಿಗಳ ವರ್ಷ – 2012

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಕನ್ನಡ ರಾಜ್ಯೋತ್ಸವದ
ಶುಭಾಶಯಗಳು

ಸಂಪುಟ 10 * ಸಂಚಿಕೆ 11 * ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ * ವಾರ್ಷಿಕ ಚಂದಾ 100/– * ಬೆಲೆ ರೂ. 12/– * ಪುಟಗಳು 20




ಸೌಹಾರ್ದ ಸಹಕಾರಿಗಳ ಸಂಖ್ಯೆ : 2250 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 476



## ಸಂವಿಧಾನದ 97ನೇ ತಿದ್ದುಪಡಿ :

# ಸಹಕಾರಿಗಳ ಪಾತ್ರ – ಸಹಕಾರಿ ಕ್ಷೇತ್ರಕ್ಕೆ ಉಜ್ವಲ ಭವಿಷ್ಯ

**ಸಹಕಾರಿಗಳು ಹೆಚ್ಚಿನ ಜವಾಬ್ದಾರಿಗಳತ್ತ ಗಮನ ಹರಿಸುವ ಸಮಯ ಇದಾಗಿದೆ. ದೇಶದ ಸಂವಿಧಾನದಲ್ಲಿ ಸಹಕಾರ ಕ್ಷೇತ್ರಕ್ಕೆ ನೀಡಿರುವ ಮಹತ್ವದ ಹಿನ್ನೆಲೆಯಲ್ಲಿ ತಿದ್ದುಪಡಿಯಾಗಲಿರುವ ಸಹಕಾರಿ ಕಾಯ್ದೆಗಳ ಅನುಷ್ಠಾನಗಳು ಸಹಕಾರಿಗಳಿಗೆ ಒಂದು ರೀತಿಯ ಸವಾಲಾಗಿ ಪರಿಣಮಿಸುವುದರಲ್ಲಿ ಎರಡು ಮಾತಿಲ್ಲ.**

ನಾಡಿನ ಸಮಸ್ತ ಸಹಕಾರಿ ಬಂಧುಗಳಿಗೆ ಕನ್ನಡ ರಾಜ್ಯೋತ್ಸವ, ದೀಪಗಳ ಹಬ್ಬ ದೀಪಾವಳಿಯ ಹಾಗೂ 59ನೇ ಸಹಕಾರ ಸಪ್ತಾಹದ ಶುಭಾಶಯಗಳು. ಕನ್ನಡ ತಾಯಿ ಭುವನೇಶ್ವರಿ ದೇವಿ ಸಮಸ್ತ ಕನ್ನಡಿಗರಿಗೆ ಸನ್ಮಂಗಳವನ್ನುಂಟುಮಾಡಲಿ. ದೀಪದಿಂದ ದೀಪ ಬೆಳಗುವಂತೆ ಎಲ್ಲರಲ್ಲೂ ಜ್ಞಾನದ ದೀಪ ಬೆಳಗಿ ಎಲ್ಲರ ಬಾಳು ಬೆಳಕಾಗಲಿ. ಆಯುರಾರೋಗ್ಯ, ಐಶ್ವರ್ಯಗಳು ವೃದ್ಧಿಯಾಗಲಿ, ಸಮಸ್ತ ಸಹಕಾರಿ ಬಂಧುಗಳಿಗೆ ನವಶಕ್ತಿಯನ್ನು ಈ ದೀಪಾವಳಿ ತಂದುಕೊಡಲಿ, ಸಹಕಾರಿ ಸಂಸ್ಥೆಗಳು ಉಜ್ವಲ ಭವಿಷ್ಯವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಸಫಲವಾಗಲಿ ಎಂದು ಹಾರೈಸುತ್ತೇನೆ.

ದೇಶದ ಸಂವಿಧಾನದ 97ನೇ ತಿದ್ದುಪಡಿ ಅನ್ವಯ ರಾಜ್ಯದ ಸಹಕಾರ ಕಾಯ್ದೆಗಳಿಗೆ ಸದ್ಯದಲ್ಲಿಯೇ ಅಗತ್ಯ ತಿದ್ದುಪಡಿಗಳನ್ನು ಮಾಡುವ ಎಲ್ಲಾ ತಯಾರಿಗಳು ನಡೆಯುತ್ತಿವೆ. ಸಹಕಾರಿಗಳು ಹೆಚ್ಚಿನ ಜವಾಬ್ದಾರಿಗಳತ್ತ ಗಮನ ಹರಿಸುವ ಸಮಯ ಇದಾಗಿದೆ. ದೇಶದ ಸಂವಿಧಾನದಲ್ಲಿ ಸಹಕಾರ ಕ್ಷೇತ್ರಕ್ಕೆ ನೀಡಿರುವ ಮಹತ್ವದ ಹಿನ್ನೆಲೆಯಲ್ಲಿ ತಿದ್ದುಪಡಿಯಾಗಲಿರುವ ಸಹಕಾರಿ ಕಾಯ್ದೆಗಳ ಅನುಷ್ಠಾನಗಳು ಸಹಕಾರಿಗಳಿಗೆ ಒಂದು ರೀತಿಯ ಸವಾಲಾಗಿ ಪರಿಣಮಿಸುವುದರಲ್ಲಿ ಎರಡು ಮಾತಿಲ್ಲ.

ಈ ಹಂತದಲ್ಲಿ ಸಹಕಾರಿಗಳ ಪಾತ್ರದ ಬಗ್ಗೆ ಸ್ವಲ್ಪಮಟ್ಟಿಗೆ ಗಂಭೀರವಾಗಿ ಯೋಚಿಸುವುದು ಅವಶ್ಯಕ. ಯಾವುದೇ ಒಂದು ಸಹಕಾರಿಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎಂದಾದರೆ ಅದು ಯೋಜನಾಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ಉತ್ತಮ ಅಧ್ಯಕ್ಷರು, ಆಡಳಿತ ಮಂಡಳಿಯವರು, ಸದಸ್ಯರು ಹಾಗೂ ಸಿಬ್ಬಂದಿಯವರನ್ನು ಹೊಂದಿದೆ ಎಂದು ಅರ್ಥೈಸಬಹುದು.

ತಿದ್ದುಪಡಿಗಳ ನಂತರ ಸದಸ್ಯರಿಗೆ ಪ್ರಥಮ ಜವಾಬ್ದಾರಿ ಸಾಮಾನ್ಯ ಸಭೆಗಳಿಗೆ ತಪ್ಪದೆ ಹಾಜರಾಗುವುದು ಅವಶ್ಯಕ. ಸಾಮಾನ್ಯ ಸಭೆಗಳನ್ನು ಕಡ್ಡಾಯವಾಗಿ ನಿಗದಿತ ಅವಧಿಯಲ್ಲಿ ಜರುಗಿಸಬೇಕು. ಇದಕ್ಕೂ ಮೊದಲು ಲೆಕ್ಕಪರಿಶೋಧನೆ ನಿಗದಿತ ಅವಧಿಯಲ್ಲಿ ಆಗಲೇಬೇಕು. ಅಂತೆಯೇ ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳುವ ಜವಾಬ್ದಾರಿ ಸಹಕಾರಿಗಳಿಗೇ ಇದೆ. ಹೀಗಾಗಿ ಆಡಳಿತ ಮಂಡಳಿಯವರು ಸದಾ ಜಾಗೃತರಾಗಿ ಕಾರ್ಯನಿರ್ವಹಿಸುವುದು ಅವಶ್ಯಕ. ಪ್ರತಿ 5 ವರ್ಷಗಳಿಗೊಮ್ಮೆ ಚುನಾವಣಾ ಪ್ರಾಧಿಕಾರದಿಂದಲೇ ಚುನಾವಣೆ ಜರುಗಲೇಬೇಕು. ಚುನಾವಣಾ ಪ್ರಾಧಿಕಾರಕ್ಕೆ ಚುನಾವಣೆಯನ್ನು ಜರುಗಿಸುವ ಮಾಹಿತಿ ಕೊಡುವ ಬಗ್ಗೆ ಆಡಳಿತ ಮಂಡಳಿಯವರು ಕಾರ್ಯನಿರ್ವಹಿಸಬೇಕಾಗುತ್ತದೆ. ಪದಾಧಿಕಾರಿಗಳ ಅವಧಿಯೂ ಸಹ 5 ವರ್ಷ. ಹೀಗಾಗಿ ಸಹಕಾರಿ ಸಂಸ್ಥೆಗಳಲ್ಲಿ ಎಲ್ಲಾ ಹಂತಗಳಲ್ಲಿ ನಿರಂತರ ಶಿಕ್ಷಣ ಹಾಗೂ ತಿಳುವಳಿಕೆ ಕಾರ್ಯಕ್ರಮಗಳನ್ನು ಸಮರೋಪಾದಿಯಲ್ಲಿ ಹಮ್ಮಿಕೊಳ್ಳಬೇಕಾಗುತ್ತದೆ. ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ಸಹಕಾರಿಯ ಹಂತದಲ್ಲಿ ನಿರ್ವಹಿಸುವುದು ಅಗತ್ಯ.

ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಯವರಲ್ಲಿ ಉತ್ತಮ ಆಂತರಿಕ ಸಂಬಂಧಗಳ ನಿರ್ವಹಣೆ ಅಗತ್ಯ. ಎಲ್ಲರಿಗೂ ಅವರವರದೇ ಆದ ಜವಾಬ್ದಾರಿಗಳನ್ನು ಈ ತಿದ್ದುಪಡಿಯು ನಿಗದಿಪಡಿಸುವುದರಿಂದ ಯಾರೊಬ್ಬರು ಸಹ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಅವಕಾಶವಿಲ್ಲ. ಇವೆಲ್ಲವೂ ಸುಗಮವಾಗಿ ನಡೆಯಲೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಎಲ್ಲರೂ ಅವರವರ ಜವಾಬ್ದಾರಿಗಳನ್ನು ನಿಷ್ಠೆಯಿಂದ ನಿರ್ವಹಿಸಿದಲ್ಲಿ ಸಹಕಾರ ಕ್ಷೇತ್ರಕ್ಕೆ ಉಜ್ವಲ ಭವಿಷ್ಯವಿದೆ ಎಂದು ಭಾವಿಸಬಹುದಲ್ಲವೇ?

– ಎಸ್.ಆರ್. ಸತೀಶಚಂದ್ರ



# ಸಹಕಾರ ಕ್ಷೇತ್ರಕ್ಕೆ ಹೊಸ ಆಯಾಮದ ಅವಶ್ಯಕತೆ

– ಶರಣಗೌಡ ಜಿ.ಪಾಟೀಲ್

59ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಸಂಭ್ರಮ. ಅಂತರ ರಾಷ್ಟ್ರೀಯ ಸಹಕಾರಿಗಳ ವರ್ಷ 2012. ಸಹಕಾರ ಕ್ಷೇತ್ರದ ಶತಮಾನದ ಸಾಧನೆಯ ಸಿಂಹಾವಲೋಕನದ ಪರ್ವಕಾಲ. ವೈಫಲ್ಯಗಳ ಆತ್ಮವಿಮರ್ಶೆ. ಸಾಗಲಿರುವ ದಾರಿಯತ್ತ ಚಿಂತನೆಯ ಸಮಯದಲ್ಲಿ ನಾವಿದ್ದೇವೆ.

ಸಹಕಾರಿ ಸಪ್ತಾಹ ಪ್ರತಿವರ್ಷ ನವೆಂಬರ 14 ರಿಂದ 20ರ ವರೆಗೆ ದೇಶಾದ್ಯಂತ ಅರ್ಥಪೂರ್ಣವಾಗಿ ಸಹಕಾರಿಗಳು ಆಚರಿಸುತ್ತಲೇ ಬಂದಿದ್ದಾರೆ. ಸರ್ಕಾರಗಳು, ಸಾರ್ವಜನಿಕರೂ ಭಾಗಿಯಾಗಿದ್ದಾರೆ. ಸಾಧನೆಗಳ ಬಗ್ಗೆ ಹಾಗೂ ಸಾಗಬೇಕಾದ ದಾರಿಯ ಬಗ್ಗೆ ಚಿಂತನೆ ನಡೆಯುತ್ತಲೇ ಇದೆ. ಪರಿಣಾಮವಾಗಿ ನಮ್ಮ ದೇಶದ ಸಹಕಾರಿ ಕ್ಷೇತ್ರ ಒಂದು ಉತ್ತಮ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ ಹೆಮ್ಮರವಾಗಿ ಬೆಳೆದಿದೆ. ಈ ದೇಶದ ಅರ್ಥವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ, ಜನರ ಜೀವನ ಪದ್ಧತಿಯಾಗಿದೆ. ನಮ್ಮ ದೇಶದ ಸಹಕಾರ ಕ್ಷೇತ್ರದ ಪ್ರಗತಿಯ ಅಂಕಿ ಅಂಶಗಳನ್ನು ಗಮನಿಸಿದರೆ ಹೆಮ್ಮೆಯ ಸಾಧನೆ ನಮ್ಮದಾಗಿದೆ. ಜಗತ್ತಿನ ಜನ ಈ ದೇಶದ ಸಹಕಾರ ಕ್ಷೇತ್ರವನ್ನು ಅಧ್ಯಯನ ಮಾಡುವುದರೊಂದಿಗೆ ಅನುಕರಣೀಯವಾಗಿದೆ.

ಪ್ರಸ್ತುತ 59ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ "ಸಹಕಾರದ ಉದ್ದಿಮೆಗಳು ಅತ್ಯುತ್ತಮ ಜಗತ್ತನ್ನು ನಿರ್ಮಿಸುತ್ತವೆ" (Co-operative world build a better world) ಎಂಬುದಾಗಿದೆ. ಅತ್ಯಂತ ಸಮಂಜಸ ಹಾಗೂ ಸತ್ಯವಾದ ಧ್ಯೇಯ ವಾಕ್ಯ ಇದಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಸಪ್ತಾಹದ 7 ದಿನಗಳಲ್ಲಿ ಒಂದೊಂದು ದಿನ ಒಂದೊಂದು ವಿಷಯಕ್ಕೆ ಚಿಂತನೆಗಾಗಿ ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ವರು ಕರೆ ನೀಡಿರುವುದು ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ಉದ್ದೇಶ ಹೊಂದಿದೆ.

ದಿನಾಂಕ 17 ನವೆಂಬರದಂದು ಸಹಕಾರ ಕ್ಷೇತ್ರವು ಕುಡಿಯುವ ನೀರಿನ ಸರಬರಾಜು ಒಳಗೊಂಡಂತೆ ಹೊಸ ಕ್ಷೇತ್ರಗಳಲ್ಲಿ ಹೊಸ ಸಹಕಾರ ಸಂಸ್ಥೆಗಳನ್ನು ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವ ದಿನವನ್ನಾಗಿ ಆಚರಣೆ ಮಾಡಲು ಪ್ರೇರೆಪಿಸುವ, ಮಾರ್ಗದರ್ಶನ ನೀಡುವ ಹಾಗೂ ಸಹಕಾರ ಸಂಸ್ಥೆಗಳಿಗೆ ಹೊಸ ಆಯಾಮವನ್ನು ಒದಗಿಸುವ ಪರ್ವಕಾಲ ಇದಾಗಿದೆ. ಇಂದು ಸಹಕಾರ ಕ್ಷೇತ್ರ ಮಾನವನ ಎಲ್ಲ ರಂಗಗಳನ್ನು ಆವರಿಸಿದೆ. "ಆಡು ಮುಟ್ಟದ ಸೊಪ್ಪಿಲ್ಲ, ಕವಿ ಕಾಣದ ಸೊಬಗಿಲ್ಲ" ಎಂಬಂತೆ ಸಹಕಾರ ಕ್ಷೇತ್ರ ವ್ಯವಸಾಯ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಕೈಗಾರಿಕಾ, ಗೃಹ ನಿರ್ಮಾಣ, ಗ್ರಾಹಕ, ಮಾರಾಟ, ಪತ್ರಿಕೊದ್ಯಮ, ಪ್ರವಾಸೊದ್ಯಮ, ಪತ್ತು, ಆರೋಗ್ಯ ಹೀಗೆ ಹಲವು ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ್ಯೂ ನೂತನ ಕ್ಷೇತ್ರಗಳ ಸಂಶೋಧನೆಯ ಅಗತ್ಯವಿದೆ. ನೂತನ ಕ್ಷೇತ್ರಗಳು ಇವೆ ಎಂಬುದನ್ನು ಇತ್ತಿಚಿನ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯನ್ನು ಸಹಕಾರಿ ಕ್ಷೇತ್ರದ ಮೂಲಕ ಗದಗ ಹಾಗೂ ಕಾರಟಗಿ ಮುಂತಾದ ಸ್ಥಳಗಳಲ್ಲಿ ಪ್ರಾರಂಭಿಸಿರುವುದು ಜ್ವಲಂತ ಉದಾಹರಣೆಯಾಗಿದೆ.

ಸಹಕಾರಿ ಸಂಸ್ಥೆಗಳು ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕರ ಸಹಕಾರದಿಂದ ಸಾರ್ವಜನಿಕರಿಗೆ ಅಗತ್ಯವಾದ ಶುದ್ಧ ಕುಡಿಯುವ ನೀರು ಸರಬರಾಜು ಕಾರ್ಯವನ್ನು ಪ್ರಾರಂಭಿಸಿರುವುದು ಶ್ಲಾಘನೀಯ ಕಾರ್ಯ. ಇದೊಂದು ಅವಿಷ್ಕಾರವೆಂತಲೇ ಭಾವಿಸಬಹುದು. ಸಹಕಾರ ಕ್ಷೇತ್ರದ ಈ ಹೊಸ ಆಯಾಮ ಸಾರ್ವಜನಿಕರಿಂದ ಹಾಗೂ ಸರ್ಕಾರದಿಂದ ಮೆಚ್ಚುಗೆ ಪಡೆಯುತ್ತಿವೆ. ಪ್ರೋತ್ಸಾಹಗಳು ಹರಿದು ಬರುತ್ತಿವೆ. ಈ ಆಯಾಮವನ್ನು ರಾಜ್ಯದ ಹಾಗೂ ದೇಶದ ಎಲ್ಲ ಸಹಕಾರಿ ಸಂಸ್ಥೆಗಳು ಅನುಸರಿಸುವಂತೆ ಉತ್ತಮ ಪ್ರಚಾರ ಅಗತ್ಯವೆಂಬುದು ನನ್ನ ಅಭಿಪ್ರಾಯ.

ಇತ್ತೀಚೆಗೆ ಬೆಂಗಳೂರು ನಗರದಲ್ಲಿ ತಲೆದೊರಿರುವ ಕಸವಿಲೇವರಿ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿರ್ವಹಿ ಸಲು ಸಹಕಾರಿ ಸಂಸ್ಥೆಗಳಿಂದ ಸಾಧ್ಯವಿದೆ ಎಂಬುದನ್ನು ಸರಕಾರ ಅಥವಾ ಬೆಂಗಳೂರು ಮಹಾನಗರ ಪಾಲಿಕೆಗೆ ತಿಳಿಯಪಡಿಸಬಹುದಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಈ ವ್ಯವಸ್ಥೆ ಯನ್ನು ಸಾವಯವ ಕೃಷಿ ಸಹಕಾರ ಸಂಸ್ಥೆಗಳಾಗಲಿ ಅಥವಾ ಬೇರೆ ಇನ್ನಾವದೆ ಸಹಕಾರಿ ಸಂಸ್ಥೆಯು ಸಹ ಇದನ್ನು ಸವಾಲಾಗಿ ಸ್ವೀಕರಿಸಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಬಹುದಾಗಿದೆ ಎಂದು ನನ್ನ ಅಭಿಪ್ರಾಯ. ಈ ನಿಟ್ಟಿನಲ್ಲಿ ಸಹಕಾರಿ ಸಂಸ್ಥೆಗಳು ಕ್ರೀಯಾಯೋಜನೆಯನ್ನು ಸಿದ್ಧಪಡಿಸಿ ಸಂಬಂದಿಸಿದವರೊಡನೆ ವ್ಯವಹರಿಸಿದಲ್ಲಿ ಖಂಡಿತವಾಗಿಯೂ ಸಹಕಾರಿಗಳು ಯಶಸ್ಸು ಸಾದಿಸುತ್ತಾರೆ ಎಂಬ ದೃಢ ನಂಬಿಕೆ ನನ್ನದಾಗಿದೆ.

1991ರ ನಂತರದ ಅರ್ಥವ್ಯವಸ್ಥೆಯಾದ ಖಾಸಗಿಕರಣ, ಉದಾರೀಕರಣ ಹಾಗೂ ಜಾಗತೀಕರಣದಂತಹ ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರ ಖಾಸಗಿಯವರ ಪೈಪೋಟಿಯನ್ನು ಎದುರಿಸುತ್ತಿದೆ. ಸಹಕಾರ ಕ್ಷೇತ್ರವನ್ನು ನುಂಗಿಬಿಡುವಂತಹ ಪ್ರಯತ್ನಗಳನ್ನು ಖಾಸಗಿ ಕ್ಷೇತ್ರದಲ್ಲಿ ಕಾಣಬಹುದಾಗಿದೆ. ಈ ಪರಿಸ್ಥಿತಿಯನ್ನು ಮೆಟ್ಟಿ ನಿಲ್ಲುವಂತಹ ಪ್ರಯತ್ನವನ್ನು ಸಹಕಾರಿ ಕ್ಷೇತ್ರ ಮಾಡಬೇಕಿದೆ. ಈ ನಿಟ್ಟಿನಲ್ಲಿ ಗ್ರಾಮ ಮಟ್ಟದ ಪ್ರಾಥಮಿಕ ಸಹಕಾರ ಸಂಸ್ಥೆಗಳಿಂದ ರಾಷ್ಟ್ರಮಟ್ಟದ ಸಹಕಾರ ಸಂಸ್ಥೆಗಳು ವ್ಯವಸ್ಥಿತವಾಗಿ, ಬಲಯುತವಾಗಿ ಕಾರ್ಯನಿರ್ವಹಿಸುವುದು ಅಗತ್ಯ.

1. ಸಹಕಾರ ಕ್ಷೇತ್ರದ ಕಾರ್ಯನಿರ್ವಹಣೆಯ ಬಗ್ಗೆ ಸಾರ್ವಜನಿಕರ ನಂಬಿಕೆ ಹಾಗೂ ವಿಶ್ವಾಸವನ್ನು ಉಳಿಸುವ ಹಾಗೂ ಬೆಳೆಸುವ ಪ್ರಯತ್ನ ಅಗತ್ಯ
2. ಸಹಕಾರ ಸಂಸ್ಥೆಗಳು ಕೇವಲ ಸೇವಾ ಸಂಸ್ಥೆಗಳಲ್ಲ. ಆರ್ಥಿಕ ಸಂಘಟನೆಗಳು ಎಂಬ ಬಗ್ಗೆ ಸಾರ್ವಜನಿಕರಿಗೆ ತಿಳಿಸುವ ಕ್ರಮದ ಅಗತ್ಯ.

5ನೇ ಪುಟಕ್ಕೆ...

ಪ್ರಸ್ತುತ 59ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ "ಸಹಕಾರದ ಉದ್ದಿಮೆಗಳು ಅತ್ಯುತ್ತಮ ಜಗತ್ತನ್ನು ನಿರ್ಮಿಸುತ್ತವೆ" **(Co-operative world build a better world)** ಎಂಬುದಾಗಿದೆ. ಅತ್ಯಂತ ಸಮಂಜಸ ಹಾಗೂ ಸತ್ಯವಾದ ಧ್ಯೇಯ ವಾಕ್ಯ ಇದಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

## ರಾಷ್ಟ್ರೀಯ ಸಹಕಾರ ಸಮ್ಮೇಳನ ಕಚೇರಿ ಉದ್ಘಾಟನೆ

# ಸಮ್ಮೇಳನದ ಯಶಸ್ಸಿಗೆ ಪೂರ್ಣ ಬೆಂಬಲ – ಸಹಕಾರ ಮಂತ್ರಿ ಶ್ರೀ ಬಿ.ಜೆ. ಪುಟ್ಟಸ್ವಾಮಿ




ದೇಶದ ಸಹಕಾರ ಕ್ಷೇತ್ರದ ಸಾಧನೆಗಳಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದ್ದು ಪ್ರಥಮ ಸ್ಥಾನಕ್ಕೇರುವತ್ತ ಯಶಸ್ಸಿನ ಹೆಜ್ಜೆ ಹಾಕುತ್ತಿದೆ. ಇದೇ ಸಂದರ್ಭದಲ್ಲಿ ಸಹಕಾರ ಭಾರತೀಯ ರಾಷ್ಟ್ರೀಯ ಸಹಕಾರಿ ಸಮ್ಮೇಳನ ಬೆಂಗಳೂರಿನಲ್ಲಿ ಜರುಗುತ್ತಿರುವುದು ಸಮಯೋಚಿತವಾಗಿದೆ ಎಂದು ಸಹಕಾರ ಸಚಿವ ಶ್ರೀ ಬಿ.ಜೆ.ಪುಟ್ಟಸ್ವಾಮಿ ಅಭಿಪ್ರಾಯಿಸಿದರು.

ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ಕಚೇರಿ ಆವರಣದಲ್ಲಿ 2013ರ ಜನವರಿ 18, 19 ರಂದು ಬೆಂಗಳೂರಿನಲ್ಲಿ ರಾಷ್ಟ್ರೀಯ ಸಹಕಾರ ಭಾರತಿಯು ಹಮ್ಮಿಕೊಂಡಿರುವ ರಾಷ್ಟ್ರೀಯ ಸಹಕಾರ ಸಮ್ಮೇಳನದ ಕಚೇರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಹಕಾರ ಕ್ಷೇತ್ರದ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳುವಲ್ಲಿ ಜರುಗುತ್ತಿರುವ ಈ ಸಮ್ಮೇಳನದ ಯಶಸ್ಸಿಗೆ ಸಂಪೂರ್ಣ ಸಹಕರಿಸುವುದಾಗಿ ಭರವಸೆ ನೀಡಿದರು.

ನಂತರ ಮಾತನಾಡಿದ ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ಸತೀಶ ಮರಾಠೆ, ಈ ಸಮ್ಮೇಳನವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥ ಶ್ರೀ ಮೋಹನ ಭಾಗವತ ರವರು ಉದ್ಘಾಟಿಸಲಿದ್ದು, ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಶ್ರೀ ಜಗದೀಶ ಶೆಟ್ಟರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಂತೆಯೇ ಮೊದಲ ದಿನದ ಅಧಿವೇಶನವನ್ನು ಸಹಕಾರ ಮಂತ್ರಿ ಶ್ರೀ ಬಿ.ಜೆ.ಪುಟ್ಟಸ್ವಾಮಿ ಉದ್ಘಾಟಿಸಲಿದ್ದು, ವಿವಿಧ ರಾಜ್ಯಗಳ ಸಹಕಾರ ಸಂಸ್ಥೆಗಳ ಸುಮಾರು 5000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.

ಕರ್ನಾಟಕದಿಂದ ಸುಮಾರು 1000 ಸಹಕಾರ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದು, ರಾಷ್ಟ್ರದ 4ನೇ ಸಮ್ಮೇಳನ ಹಾಗೂ ದಕ್ಷಿಣ ಭಾರತದಲ್ಲಿ ಪ್ರಥಮ ಅಧಿವೇಶನವಾಗಿದೆ. ಸಹಕಾರ ಕ್ಷೇತ್ರದ ಜ್ವಲಂತ ಸಮಸ್ಯೆಗಳಾದ ನೇರ ತೆರಿಗೆ ಪದ್ಧತಿಯಿಂದ ಸಹಕಾರಿ ಸಂಸ್ಥೆಗಳ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ, ಸಂವಿಧಾನದ 97ನೇ ತಿದ್ದುಪಡಿಯಿಂದ ದೇಶ ಎಲ್ಲಾ ರಾಜ್ಯಗಳ ಸಹಕಾರ ಕಾಯ್ದೆಗಳಲ್ಲಿ ಬದಲಾವಣೆಗಳು ಆಗುತ್ತವೆ ಎಂದರು.

ನಂತರ ಸಹಕಾರ ಮಹಾಮಂಡಳದ ಅಧ್ಯಕ್ಷ ಶ್ರೀ ಜಿ.ಟಿ.ದೇವೇಗೌಡ ಮಾತನಾಡಿ ಇದೊಂದು ಉತ್ತಮ ಸಹಕಾರಿ ಸಮ್ಮೇಳನವಾಗಿ ಹೊರಹೊಮ್ಮಲು ಕರ್ನಾಟಕ ಎಲ್ಲಾ ಸಹಕಾರಿ ಗಳು ಸಹಕರಿಸುವುದು ಅವಶ್ಯಕ. ಬೇರೆ ರಾಜ್ಯಗಳ ಸಹಕಾರಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುವುದರಿಂದ ನಮ್ಮ ರಾಜ್ಯದ ಸಹಕಾರಿ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಸಾಧನೆಗಳ ಬಗ್ಗೆ ಮಾಹಿತಿ ಮಾಡಿಕೊಡುವುದರ ಜೊತೆಗೆ ಸಹಕಾರಿ ಕ್ಷೇತ್ರದಲ್ಲಿ ಕರ್ನಾಟಕ ಅಗ್ರಸ್ಥಾನದಲ್ಲಿದೆ ಎಂಬುದನ್ನು ನಾವೆಲ್ಲ ಸಹಕಾರ ನೀಡುವುದರ ಮೂಲಕ ಈ ಸಮ್ಮೇಳನ ವನ್ನು ಯಶಸ್ವಿಗೊಳಿಸುವುದರ ಮೂಲಕ ಸಹಕರಿಸಬೇಕಾಗುತ್ತದೆ ಎಂದು ತಿಳಿಸಿದರು.

4ನೇ ರಾಷ್ಟ್ರೀಯ ಸಹಕಾರಿ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಶ್ರೀ ಆರ್.ಎಮ್.ಮಂಜುನಾಥಗೌಡರವರು ವಂದಿಸಿದರು. ಸೌಹಾರ್ದ ಸಹಕಾರಿಯ ಉಪಾಧ್ಯಕ್ಷ ಹಾಗೂ ಸಹಕಾರ ಭಾರತೀಯ ಪ್ರಧಾನ ಕಾರ್ಯದರ್ಶಿ ಶ್ರೀ ಗುರುನಾಥ ಜ್ಯಾಂತೀಕರ ಸ್ವಾಗತ ಕೋರಿದರು. ಕ್ಯಾಸ್ಕಾರ್ಡ್ ಬ್ಯಾಂಕಿನ ಅಧ್ಯಕ್ಷ ಶ್ರೀ ಶಿವರಾಮು, ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರ, ನಿರ್ದೇಶಕ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ರಮೇಶ, ಶ್ರೀ ರವಿಕುಮಾರ, ಶ್ರೀಮತಿ ನಾಗರತ್ನ, ಅನೇಕ ಸಹಕಾರ ಸಂಸ್ಥೆಗಳ ಅಧ್ಯಕ್ಷರು ಹಾಗೂ ನಿರ್ದೇಶಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಕಛೇರಿಯ ವಿಳಾಸ :**

ರಾಷ್ಟ್ರೀಯ ಸಹಕಾರ ಭಾರತಿ,ಸಮ್ಮೇಳನ ಕಛೇರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಅತಿಥಿಗೃಹ ಕಟ್ಟಡ, ಚಾಮರಾಜ ಪೇಟೆ ಬೆಂಗಳೂರು –560018.

ದೂರವಾಣಿ –080–65340025 ಸಂಪರ್ಕ ಅಧಿಕಾರಿ ಶ್ರೀಮತಿ ಕವಿತ, ಶ್ರೀ ರವಿ –9019811325

## ಆಧಾರರಹಿತ ಸಾಲಕ್ಕೆ ಸಂಬಂಧಿಸಿದ ಮಾರ್ಗದರ್ಶಿ ಹಿಂದಕ್ಕೆ

**ಪೀಠಿಕೆ :** ಸೌಹಾರ್ದ ಸಹಕಾರಿಗಳು ನೀಡುತ್ತಿರುವ ಆಧಾರರಹಿತ ಸಾಲಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಿಗಳನ್ನು ಕ.ಸೌ.ಸ. ಅಧಿನಿಯಮ, 1997ರ ಕಲಂ 53 (7) (ಎ) ಹಾಗೂ (ಎಚ್) ಅಡಿ ದಿನಾಂಕ 10.04.2012 ಸುತ್ತೋಲೆ ಸಂಖ್ಯೆ ಸಂಸ/ಆ–3/2012–13 ಮೂಲಕ ನೀಡಲಾಗಿತ್ತು. ಆ ನಂತರದಲ್ಲಿ ಅನೇಕ ಸಹಕಾರಿಗಳು ಸುತ್ತೋಲೆಯಲ್ಲಿ ನೀಡಿರುವ ಮಿತಿಯು ಸಹಕಾರಿಯ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಎಂದು ಅಭಿಪ್ರಾಯಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ದಿನಾಂಕ 31.07.2012 ರಂದು ನಡೆದ ಆಡಳಿತ ಮಂಡಳಿಯು ಈ ಸುತ್ತೋಲೆಯನ್ನು ಪುನರ್ ಪರೀಶಿಲಿಸಿತು ಮತ್ತು ಸುತ್ತೋಲೆಯನ್ನು ಹಿಂಪಡೆದು, ಸುತ್ತೋಲೆಯಲ್ಲಿ ಹೇಳಿರುವ ಅಂಶಗಳನ್ನು ಸಲಹೆಯ ರೂಪದಲ್ಲಿ ನೀಡಲು ನಿರ್ಣಯಿಸಿತು. ಈ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶ ನೀಡಿದೆ.

### ಆದೇಶ

ದಿನಾಂಕ 10.04.2012ರಂದು ಸುತ್ತೋಲೆ ಸಂಖ್ಯೆ ಸಂಸ/ಆ–3/2012–13 ಮೂಲಕ ಕ.ಸೌ.ಸ. ಅಧಿನಿಯಮ, 1997ರ ಕಲಂ 53 (7) (ಎ) ಹಾಗೂ (ಎಚ್) ಅಡಿ ನೀಡಿರುವ ಸೌಹಾರ್ದ ಸಹಕಾರಿಗಳು ನೀಡುತ್ತಿರುವ ಆಧಾರರಹಿತ ಸಾಲಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಿಗಳನ್ನು ಹಿಂಪಡೆದಿದೆ. ಈ ಆದೇಶವನ್ನು ನನ್ನ ಮೊಹರು ಹಾಗೂ ಸಹಿಯೊಂದಿಗೆ ಇಂದು ಅಂದರೆ, ದಿನಾಂಕ:02.10.2012ರಂದು ನೀಡಲಾಗಿದೆ.

**ಸಹಿ/– ವ್ಯವಸ್ಥಾಪಕ ನಿರ್ದೇಶಕ**

## ಆದಾಯ ತೆರಿಗೆ ವಿನಾಯಿತಿ

ಬೆಂಗಳೂರಿನ ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿಯಮಿತ ಇವರ ಅಪೀಲ್ ನಂಬರ್ 793/ಎಸಿ/3(1)/ಸಿಐಟಿ(ಎ)–ii/2011–12 ದಿನಾಂಕ: 1/11/2012ರಲ್ಲಿ ಕಮಿಶನರ್ ಆಫ್ ಇನ್‌ಕಂಟ್ಯಾಕ್ಸ್ ಬೆಂಗಳೂರು ಇವರು ಆದೇಶ ಹೊರಡಿಸಿ ಆದಾಯ ತೆರಿಗೆ ವಿನಾಯಿತಿ ನೀಡಿದ್ದಾರೆ.

## ಅಧ್ಯಕ್ಷರಾಗಿ ಮರು ಆಯ್ಕೆ



**ಶ್ರೀ ಎಚ್.ವಿ. ರಾಜೀವ್‌ರವರು**

ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್‌ಗೆ ಅಧ್ಯಕ್ಷರಾಗಿ ಮರು ಆಯ್ಕೆಯಾಗಿದ್ದಾರೆ.

## ಬೆಳಕು



ಬೆಳಗುವ ದೀಪದಿಂದ ಹೊಳೆಯುವ ಅಕ್ಷರಗಳ
ಕಣ್ಣಲ್ಲಿ ಕಂಡು ಬೆಳಕು ಬೆಳಗಿಸುವುದು ಯಾರನ್ನಾದರು
ಅದೆಲ್ಲಿತೋ ಒಳಗಿನ ಹುಮ್ಮಸು ಬೆಳಕ ನೋಡಿದೆಡೆ
ಬಂದಿತು ಹಮ್ಮಸ್ಸು ಎರಡಕ್ಷರ ಬರೆಯಲು ಹೊಳೆದೆಡೆ

ಮನಸ್ಸಿಗೆ ಬಂದಿತು ಬೆಳಗಿತು ಹೊಳೆಯಿತು ಬರೆದೆ
ಹಾಕಿದಷ್ಟು ಅಕ್ಷರದೆಣ್ಣೆಯ ಹರಿಯಿತು ಬೆಳಕಿನ ಧಾರೆ.
ಅರ್ಪಣೆಯ ಹಾದಿಯಲ್ಲಿ ಬತ್ತಿ ಎಣ್ಣೆಯು ಲೋಕವ ಬೆಳಗುವ
ಅವಸರದಲಿ ಸುಡುತ್ತಿದ್ದೇನೆ ತಾನು ಎಂಬುದೆ ಅರಿವಿಲ್ಲ ಅವಕೆ

ಬೆಳಕು ಬೀರುತಾ ಬೀರುತಾ ಕತ್ತಲೆಯ ಹೊಡೆದೋಡಿಸಿತು
ತಾನದೊಂದು ಪುಟ್ಟ ಬೆಳಕು ಹೇಳಿತು ಹೀಗೆ ದೀಪದಡಿಯಲ್ಲಿ
ಕತ್ತಲೆಯ ಹಾಗೇ ಇರದೆ ಲೋಕವ ಬೆಳಗ ಹೊರಡುವ
ನಾವು ನಮ್ಮ ಒಳಮನವ ಕತ್ತಲಿಸದೆ ದೀಪದಂತೆ ಬೆಳಗಗಿಸಿರಿ.

**– ಸವಿತ ಎನ್.ಇ.**

## ಸಹಕಾರ ಕ್ಷೇತ್ರಕ್ಕೆ ಹೊಸ ಆಯಾಮದ ಅವಶ್ಯಕತೆ

...3ನೇ ಪುಟದಿಂದ

3. ಸಗಟು ವ್ಯಾಪಾರದಿಂದ ಚಿಲ್ಲರೆ ವ್ಯಾಪಾರದವರೆಗೆ ಎಲ್ಲಾ ಸ್ತರಗಳಲ್ಲಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುವ ಕ್ರಮದ ಬಗ್ಗೆ ಚಿಂತನೆ ಹಾಗೂ ಕ್ರೀಯಾಯೋಜನೆ ರೂಪಿಸುವ ಅಗತ್ಯತೆ.
4. ಸದಸ್ಯರ ಸಾರ್ವಜನಿಕ ಪ್ರತಿ ದಿನದ, ಪ್ರತಿಗಳಿಗೆಯ ಬೇಕು ಬೇಡಿಕೆಗಳ ಸರಬರಾಜು ಸಹಕಾರಿ ಕ್ಷೇತ್ರ ನಿರ್ವಹಣೆ ಮಾಡುವಂತಾಗಲು ಕ್ರೀಯಾ ಯೋಜನೆ.
5. ಪ್ರವಾಸೋದ್ಯಮ, ಪತ್ರಿಕೋದ್ಯಮ, ಪಶು ಆರೋಗ್ಯ, ಆರೋಗ್ಯ, ಗ್ರಾಮೀಣ ವಸತಿ, ವ್ಯವಸಾಯ ವಿಮೆ, ನೀರು ಸರಬರಾಜು ಸೇವೆ, ನೀರು ಸಂಗ್ರಹಣಾ ವ್ಯವಸ್ಥೆ, ವಿದ್ಯುತ್‌ಚಕ್ತಿ ಉತ್ಪಾದನೆ ಹಾಗೂ ವಿತರಣೆ ನಗರ ಸಾರಿಗೆ ಸಂವಹನ ಹಾಗೂ ಸಂಪರ್ಕಜಾಲ, ಕೈಗಾರಿಕೆ, ಮಾರಾಟ ಹಾಗೂ ವಿತರಣಾ ವ್ಯವಸ್ಥೆ ಶಿಕ್ಷಣ ಹಾಗೂ ತರಬೇತಿ ವ್ಯವಸ್ಥೆಗಳು, ಉದ್ಯೋಗ ವಿನಿಮಯ ಮುಂತಾದ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಅವಶ್ಯತೆಯ ಬಗ್ಗೆ ಚಿಂತನೆ ಹಾಗು ಕ್ರೀಯಾ ಯೋಜನೆ ಸಿದ್ಧಪಡಿಸುವ ಅಗತ್ಯತೆ.
6. ಸರಕಾರದ ಹಾಗೂ ಸಾರ್ವಜನಿಕ ಸಂಸ್ಥೆಯ ಹಲವು ಕಾರ್ಯಗಳನ್ನು ಸಹಕಾರಿ ಎಜನ್ಸಿ ಮೂಲಕ ಕಾರ್ಯನಿರ್ವಹಿಸುವುದರ ಬಗ್ಗೆ ಚಿಂತನೆ.
7. ಆಧುನಿಕ ಮಾಹಿತಿ ಹಾಗೂ ತಂತ್ರಜ್ಞಾನ ಅಳವಡಿಸಿ ಕಾರ್ಯ ನಿರ್ವಹಿಸುವ ಅಗತ್ಯತೆ.

ಸಹಕಾರಿ ಸಪ್ತಾಹದ ಆಚರಣೆಯ ಸಾರ್ಥಕತೆಗಾಗಿ ಈ ಅಂಶಗಳ ಬಗ್ಗೆ ಚಿಂತನೆ ಮಾಡಿ ಕಾರ್ಯರೂಪಕ್ಕೆ ತಂದಾಗ ಸಹಕಾರ ಕ್ಷೇತ್ರದ ಬಲವರ್ಧನೆ ಸಾಧ್ಯ.

## ಇಂಟರನೆಟ್‌ನಲ್ಲಿ ಮಾಹಿತಿ ಒದಗಿಸುವ ದೃಷ್ಟಿಯಿಂದ
# ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಮಸ್ಕಿಯಲ್ಲಿ ನೂತನ ವೆಬ್‌ಸೈಟ್ ಆರಂಭ

ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿಯು ತನ್ನ ಮಾಹಿತಿ ಯನ್ನು ಇಂಟರನೆಟ್‌ನಲ್ಲಿ ಒದಗಿಸುವ ದೃಷ್ಟಿಯಿಂದ ನೂತನ ವೆಬ್‌ಸೈಟ್ www.sbscooperative.in ನ್ನು ಉದ್ಘಾಟಿಸುವ ಕಾರ್ಯಕ್ರಮ ಮತ್ತು ಗ್ರಾಹಕರ ಸಭೆ-2012ನ್ನು 19 ನೇ ಅಕ್ಟೋಬರ್ 2012 ರಂದು ಮಸ್ಕಿಯ ಶ್ರೀ ಭ್ರಮರಾಂಬ ದೇವಸ್ಥಾನದಲ್ಲಿ ಏರ್ಪಡಿಸಲಾಗಿತ್ತು.

ಸಹಕಾರಿಯ ನೂತನ ವೆಬ್‌ಸೈಟ್‌ನ್ನು ಮಸ್ಕಿ ಕ್ಷೇತ್ರದ ಶಾಸಕರಾದ ಶ್ರೀ ಪ್ರತಾಪಗೌಡ ಪಾಟೀಲ್ ಅವರು ಉದ್ಘಾಟಿಸಿದರು. ಇದೇ ಕಾರ್ಯಕ್ರಮದಲ್ಲಿ ಶ್ರೀ ಕಮಲ ಕುಮಾರ. ಎಸ್, Vice President, Raichur Dist. Chamber of Commerce & Industry. ಅವರು ಗ್ರಾಹಕರಿಗೆ "Business-The Changing Scenario" ಕುರಿತು ಕಾರ್ಯಾಗಾರವನ್ನು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಡಾ.ಶಿವಶರಣಪ್ಪ ಇತ್ಲಿ ವಹಿಸಿಕೊಂಡಿದ್ದರು.




ಸಹಕಾರಿಯ ಸಲಹಾ ಸಮಿತಿ ಸದಸ್ಯರು & ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶ್ರೀ ಮಹಾಂತೇಶ ಮಸ್ಕಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರೆ, ಶ್ರೀ ಬಸವರಾಜ ಶಾಸ್ತ್ರಿ, ಶಾಖಾ ವ್ಯವಸ್ಥಾಪಕರು ಕಾರ್ಯಕ್ರಮ ನಿರೂಪಣೆ ಮಾಡಿದರು.

ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ, ಉಪಾಧ್ಯಕ್ಷರಾದ ಶ್ರೀ ಶರಣಪ್ಪ ಹುಲ್ಲೂರು, ಶ್ರೀ ಅಂದಾನೆಪ್ಪ ಗುಂಡಳ್ಳಿ, ಶ್ರೀ ತಿಮ್ಮನಗೌಡ ಗುಡದೂರು ಮತ್ತು ಶ್ರೀ ಮಹಾದೇವಪ್ಪಗೌಡ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

## ಸ್ವಾತಿ ಜ್ಯೋತಿ ಮಹಿಳಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 5ನೇ ವಾರ್ಷಿಕೋತ್ಸವ

ಕಳೆದಅಕ್ಟೋಬರ್15ರಂದುಸ್ವಾತಿ ಜ್ಯೋತಿ ಮಹಿಳಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 5ನೇ ವಾರ್ಷಿಕೋತ್ಸವವು ನಗರದ ಪುಟ್ಟಣ್ಣಚೆಟ್ಟಿ ಟೌನ್‌ಹಾಲ್‌ನಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಮಾರಂಭದಲ್ಲಿ ನಬಾರ್ಡ್ ಫೈನಾನ್ಸಿಯಲ್ ಸರ್ವಿಸಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಸಿ.ಪಿ. ಮೋಹನ್, ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಹೆಚ್.ಸಿ.ನಾಗರತ್ನ, ಉದಯ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ವೈ.ಗುಂಡೂರಾವ್, ಶ್ರೀ ವಿಜಯ ಕುಲ್ಕರ್ಣಿ, ಶ್ರೀ ಶಿವಕುಮಾರ ಎನ್. ಮುಂತಾದವರು ಭಾಗವಹಿಸಿ ಸಹಕಾರಿಯ ಅಭಿವೃದ್ಧಿಗೆ ಪೂರಕವಾದ ವಿವಿಧ ವಿಷಯಗಳ ಬಗ್ಗೆ ಹಾಗೂ ಯೋಜನೆಗಳ ಬಗ್ಗೆ ಮಾತನಾಡಿದರು. ಸಹಕಾರಿಯ ಅಧ್ಯಕ್ಷೆ ಶ್ರೀಮತಿ ವಿಮಲ ಕಾರ್ಯಕ್ರಮ ನಡೆಸಿಕೊಟ್ಟರು.

**ಸೂಚನೆ** : ಉದ್ದೇಶಿತ ಎಸ್.ಕೆ.ಕಿಂಗ್ಸ್ ಪ್ರೈಡ್ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಬೆಂಗಳೂರು ಇದರ ನೋಂದಣಿ ಪೂರ್ವ ಷೇರುಸಂಗ್ರಹಣೆಗೆ ನೀಡಲಾಗಿದ್ದ ಅನುಮತಿಯನ್ನು ಹಿಂಪಡೆಯುವ ಬಗ್ಗೆ ಕರ್ನಾಟಕ ಸರ್ಕಾರ ಸಹಕಾರ ಇಲಾಖೆ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ1 ಅಲಿಆಸ್ಕರ್ ರಸ್ತೆ ಬೆಂಗಳೂರು-52 ಸಂಖ್ಯೆ : ಆರ್ ಎಸ್ ಆರ್ / ಸೌಹಾರ್ದ /227/2012-13 ದಿನಾಂಕ : 25.10.2012ರ ಪತ್ರದಲ್ಲಿ ತಿಳಿಸಲಾಗಿದೆ.




ಗುಲ್ಬರ್ಗಾದ ಹರಸೂರಿನ ಶ್ರೀ ಕರಿಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ.,ಯಲ್ಲಿ 4ನೇ ಸಾಮಾನ್ಯ ಸಭೆ ಯಶಸ್ವಿಯಾಗಿ ನಡೆಯಿತು.

## ಶ್ರೀ ಲಕ್ಷ್ಮೀ ವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಕಾರಟಗಿಯಲ್ಲಿ ಪರಿಶುದ್ಧ ನೀರಿನ ಘಟಕ

ಗದಗಿನಲ್ಲಿ ಶ್ರೀ ಹೆಚ್.ಕೆ. ಪಾಟೀಲ್‌ರವರ ನೇತೃತ್ವದಲ್ಲಿ ವಿವಿಧ ಗ್ರಾಮಗಳಲ್ಲಿ ಪ್ರಾರಂಭ ವಾಗಿರುವ ಈ ಯೋಜನೆಯನ್ನು ಅಧ್ಯಯನ ಮಾಡಿ ಅದರಿಂದ ಪ್ರೇರಿತರಾಗಿ ಕೊಪ್ಪಳ ತಾಲ್ಲೂಕು ಕಾರಟಗಿಯಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ, ಎಲ್.ವಿ.ಟಿ. ಸಮೂಹ ಸಂಸ್ಥೆಗಳು ಹಾಗೂ ಗ್ರಾಮ ಪಂಚಾಯಿತಿ ಕಾರಟಗಿ ಇವರುಗಳು ಸಂಯುಕ್ತವಾಗಿ ಸಾರ್ವಜನಿಕರಿಗೆ ಪರಿಶುದ್ಧ ನೀರು ಸರಬರಾಜು ಮಾಡುವ ಜನೋಪಯೋಗಿ ಕಾರ್ಯಕ್ರಮವನ್ನು ಪ್ರಾರಂಭಿಸಿದೆ.



ಯೋಜನೆಯನ್ವಯ ಸಹಕಾರಿಯು ಯಂತ್ರೋಪಕರಣಗಳಿಗಾಗಿ ಅಂದಾಜು 5.00 ಲಕ್ಷ ರೂ.ಗಳ ವೆಚ್ಚ ಮಾಡಿದ್ದು, ನಿರ್ವಹಣೆಯನ್ನು ಸಹ ಸಹಕಾರಿಯು ನಿರ್ವಹಿಸುವುದು. ಈ ವ್ಯವಸ್ಥೆಗೆ ಬೇಕಿರುವ ಕಟ್ಟಡವನ್ನು ಎಲ್.ವಿ.ಟಿ. ಸಮೂಹ ಸಂಸ್ಥೆಗಳಿಂದ ಒದಗಿಸಲಾಗಿದೆ. ವಿದ್ಯುತ್ ಬಿಲನ್ನು ಗ್ರಾಮ ಪಂಚಾಯಿತಿಯವರು ಭರಿಸುತ್ತಾರೆ. 1ರೂಗೆ 10ಲೀ ನೀರು ಕೊಡಲಾಗುತ್ತದೆ. ಎ.ಟಿ.ಎಮ್. ವ್ಯವಸ್ಥೆಯ ಮಾದರಿಯಲ್ಲಿ ಈ ವಿತರಣಾ ವ್ಯವಸ್ಥೆ ಮಾಡಲಾಗಿದೆ.

ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ ಉದ್ಘಾಟಿಸಿದರು. ಕಾರ್ಯಕ್ರಮವು ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಜಿ ಶ್ರೀ ವೇದಮೂರ್ತಿ ಭುವನೇಶ್ವರ ಸ್ವಾಮಿಜಿ ಗ್ರಾಮಪಂಚಾಯಿತಿ ಅಧ್ಯಕ್ಷ ಶ್ರೀಮತಿ ಸೂನುಬಾಯಿ ಶಿಂಗ್ರೆ, ತಾ. ಪಂ. ಸದಸ್ಯ ಶ್ರೀಮತಿ ಟಿ.ನಾಗಮ್ಮ ಶ್ರೀ ಗೀರೆಗೌಡ, ಸಹಕಾರಿ ನಿರ್ದೇಶಕರು ಸದಸ್ಯರು ಗ್ರಾಮ ಪಂಚಾಯಿ ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಸಣ್ಣಸೂಗಪ್ಪನವರ ನೃತ್ವತ್ವದಲ್ಲಿ ನಡೆಯಿತು.

ಎಲ್.ವಿ.ಟಿ. ಸಮೂಹ ಸಂಸ್ಥೆಗಳ ಅಧ್ಯಕ್ಷರೂ ಹಾಗೂ ಸಹಕಾರಿಯ ಸ್ಥಾಪಕ ಅಧ್ಯಕ್ಷರೂ ಆಗಿರುವ ಶ್ರೀ ಸಣ್ಣಸೂಗಪ್ಪನವರು ಈ ಯೋಜನೆ ಜಿಲ್ಲಾದ್ಯಂತ ಉತ್ತಮ ಪ್ರತಿಕ್ರಿಯೆ ದೊರಕಿದೆ. ಅನೇಕ ಸಹಕಾರಿ ಸಂಘಸಂಸ್ಥೆಗಳು ಯೋಜನೆಯನ್ನು ಅಧ್ಯಯನ ಮಾಡಿ ತಮ್ಮ ಸಂಸ್ಥೆಗಳಲ್ಲೂ ಈ ಯೋಜನೆಯನ್ನು ಪ್ರಾರಂಭಿಸಲು ಚಿಂತನೆ ನಡೆಸಿದ್ದಾರೆ. ಸಾಮಾನ್ಯರಿಗಾಗಿ ಅವರಿಗೆ ಪರಿಶುದ್ಧ ನೀರು ಒದಗಿಸುವ ದೃಷ್ಟಿಯಿಂದ ಪ್ರಾರಂಭಿಸಿದೆ. ಬೇರೆ ಬೇರೆ ಸಂಸ್ಥೆಗಳೂ ಸಹ ಈ ರೀತಿಯ ಯೊಜನೆ ಪ್ರಾರಂಭಿಸಿ ಸಾಮಾಜಿಕ ಕಳಕಳಿ ಎಂಬ ಸಹಕಾರಿ ತತ್ವದಡಿ ಕಾರ್ಯನಿರ್ವಹಿಸಲು ಕರೆನೀಡಿದರು.

## ನವೋದಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,ಯಲ್ಲಿ 6ನೇ ವಾರ್ಷಿಕ ಮಹಾಸಭೆ




ಸೆ. 22ರಂದು ಮಂಗಳೂರಿನ ನವೋದಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಹಕಾರಿಯಲ್ಲಿ 6ನೇ ವಾರ್ಷಿಕ ಮಹಾಸಭೆ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರದ ಸಭಾಭವನದಲ್ಲಿ ಜರುಗಿತು. ಸಹಕಾರಿಯಲ್ಲಿ 5096 ಸದಸ್ಯರಿದ್ದು, 90,50,000 ಪಾಲು ಬಂಡವಾಳ, 857 ಲಕ್ಷ ಠೇವಣಿ, 38 ಲಕ್ಷ ಲಾಭ ಹಾಗೂ 2011–12ನೇ ಸಾಲಿಗೆ ಶೇ. 9ರಷ್ಟು ಪಾಲು ಮುನಾಫೆ ಹೊಂದಿರುವುದನ್ನು ಘೋಷಿಸಿಕೊಂಡಿತು.

## ಗುರುವಾಯನಕೆರೆಯಲ್ಲಿ ಸೌಹಾರ್ದ ಸಹಕಾರಿ ಸಿಬ್ಬಂಧಿಗಳಿಗಾಗಿ ವ್ಯಕ್ತಿತ್ವ ವಿಕಸನದ 8ನೇ ತಂಡದ ತರಬೇತಿ ಕಾರ್ಯಕ್ರಮ

ದಕ್ಷಿಣ ಕನ್ನಡ ಜಿಲ್ಲೆ ಗುರುವಾಯನಕೆರೆ ನಾಗರೀಕ ಸೇವಾ ಟ್ರಸ್ಟ್‌ನಲ್ಲಿ ಡಿಸೆಂಬರ್ 1 ರಿಂದ 10ರವರೆಗೆ 8ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಿಂದ ಮಂಗಳೂರಿಗೆ ಹೋಗುವ ದಾರಿಯಲ್ಲಿ 20 ಕೀ.ಮೀ. ದೂರದಲ್ಲಿರುವ ನಾಗರೀಕ ಸೇವಾ ಟ್ರಸ್ಟ್ ಗುರುವಾಯನಕೆರೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಹಕಾರಿ ಸಿಬ್ಬಂದಿಯವರು ಕೂಡಲೇ ತಮ್ಮ ಹೆಸರು ವಿವರಗಳನ್ನು ಪ್ರವೇಶ ಶುಲ್ಕ ರೂ.5,000/– ಕಳುಹಿಸಿ ನೋಂದಾಯಿಸಿಕೊಳ್ಳಲು ಸೂಚಿಸಿದೆ. ಭಾಗಹವಹಿಸುವ ಪ್ರತಿನಿಧಿಗಳ ಸಂಖ್ಯೆ 50 ಮಾತ್ರ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ನೋಂದಾವಣೆಗೆ ಕೊನೆಯ ದಿನಾಂಕ : 17/11/2012.





ಸುಭಾಷ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ ಸರ್ವಸದಸ್ಯರ ಸಭೆ ಶಿವಮೊಗ್ಗದಲ್ಲಿ ಯಶಸ್ವಿಯಾಗಿ ಜರುಗಿತು.



ಶ್ರೀ ಗೌರಿ ಮಹಿಳಾ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ.ಯ 2ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಹಾಜರಿದ್ದ ಸಹಕಾರಿಗಳು.




ಗುಲ್ಬರ್ಗಾದ ಜನಶ್ರೀ ಸೌಹಾರ್ದ ಪತ್ತಿನ ಸಹಕಾರಿ ನಿ., ಸಹಕಾರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಅಧ್ಯಕ್ಷರಾದ ಶ್ರೀ ಎಸ್. ಆರ್.ಸತೀಶ್‌ಚಂದ್ರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್‌ರವರು, ಗುಲ್ಬರ್ಗಾ ವಿಭಾಗೀಯ ಅಧಿಕಾರಿ ಶ್ರೀ ಸಂಜಯ್‌ರವರೊಂದಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.



ತುಮಕೂರು ಅರ್ಬನ್ ವಿವಿಧೋದ್ದೇಶ ಸೌಹಾರ್ದ ಕೋ–ಆಪರೇಟಿವ್ ಲಿ., ತುಮಕೂರು ಸಹಕಾರಿಯ ನೂತನ ಕಚೇರಿಯ ಸ್ಥಳಾಂತರ ಸಮಾರಂಭ.



ಸಿದ್ದಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ನೂತನ ಗ್ರಂಥಾಲಯವನ್ನು ದಿನಾಂಕ : 21.10.2012ರಂದು ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶ್‌ಚಂದ್ರ ಉದ್ಘಾಟಿಸಿದರು.



# ಭಾರತದಲ್ಲಿ ಕೃಷಿ

ಭಾರತ ಕೃಷಿ ಪ್ರಧಾನವಾದ ರಾಷ್ಟ್ರ. ದೇಶದಲ್ಲಿ ಶೇಕಡಾ 75% ಮಂದಿ ಕೃಷಿಯನ್ನೇ ಮೂಲ ಕಸುಬನ್ನಾಗಿ ಅವಲಂಬಿಸಿದ್ದಾರೆ. ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಗೆ ಅವಕಾಶವಾಗಿದೆ. ಭಾರತದ ಕೃಷಿಯ ಸ್ಥಾನ ಬಹಳ ಮಹತ್ವದ್ದಾಗಿದೆ.

- ಬೃಹದಾಕಾರವಾಗಿ ಬೆಳೆಯುತ್ತಿರುವ ಭಾರತದ ಜನಸಂಖ್ಯೆಗೆ ಆಹಾರ ಉತ್ಪನ್ನವನ್ನು ಪೂರೈಸುತ್ತಿದೆ.
- ಗ್ರಾಮೀಣ ಜನರಿಗೆ ಉದ್ಯೋಗವನ್ನು ನೀಡಿದೆ.
- ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು ಒದಗಿಸುತ್ತಿದೆ.
- ಕೃಷಿಯ ಉತ್ಪನ್ನಗಳನ್ನು ರಫ್ತು ಮಾಡುವುದರಿಂದ ಆದಾಯದ ಮಟ್ಟ ಹೆಚ್ಚುತ್ತಿದೆ.
- ತೃತೀಯ ವಲಯದ ಅಭಿವೃದ್ಧಿ:- ಬ್ಯಾಂಕಿಂಗ್, ಮಾರುಕಟ್ಟೆ, ಸಾರಿಗೆ.
- ಪ್ರಾಣಿಗಳಿಗೆ ಮೇವನ್ನು ಒದಗಿಸುತ್ತಿದೆ. ಜೊತೆಗೆ ವ್ಯವಸಾಯಕ್ಕೆ ಪೂರಕವಾದ ಹೈನುಗಾರಿಕೆ, ಕೋಳಿಸಾಕಾಣಿಕೆ, ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದೆ.

ಹೀಗೆ ಕೃಷಿ ಕ್ಷೇತ್ರವು ರಾಷ್ಟ್ರದ ಆದಾಯದ ಜೊತೆಗೆ ಮೇಲಿನ ಎಲ್ಲಾ ಅಂಶಗಳಿಗೆ ಸಹಾಯಕವಾಗಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಕೃಷಿಯಲ್ಲಿ ಉತ್ಪಾದನೆಯ ಮಟ್ಟ ಕಡಿಮೆಯಾಗುತ್ತಿರುವುದು ಕಳವಳಕಾರಿಯಾಗಿದೆ. ಕೃಷಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದು ಅವಶ್ಯಕ. ಕೃಷಿಯಲ್ಲಿ ಹಲವಾರು ನ್ಯೂನ್ಯತೆಗಳಿಂದ ಕೂಡಿರುವುದು ಕುಟುಂಬದ ಆದಾಯ ಕಡಿಮೆಯಾಗಿ, ಉಳಿತಾಯದ ಪ್ರಮಾಣ ಕಡಿಮೆಯಾಗುತ್ತಿದೆ. ಇದರಿಂದ ರಾಷ್ಟ್ರದ ಅಭಿವೃದ್ಧಿ ಕುಂಠಿತವಾಗುತ್ತದೆ.

### ಕೃಷಿ ಕ್ಷೇತ್ರದಲ್ಲಿನ ಸಮಸ್ಯೆಗಳು :

- ಕೃಷಿಯಲ್ಲಿ ಇಂದಿಗೂ ತೀರಾ ಹಳೆಯ, ಅವೈಜ್ಞಾನಿಕ ಪದ್ಧತಿಯನ್ನೇ ಅವಲಂಬಿಸಿರುವುದು.
- ಉತ್ತಮ ರಸಗೊಬ್ಬರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸದೆ ಇರುವುದು.
- ಅಧಿಕ ಇಳುವರಿ ನೀಡುವ ಬಿತ್ತನೆ ಬೀಜಗಳ ಕೊರತೆಯಿರುವುದು.
- ಕ್ರಿಮಿನಾಶಕ ಔಷಧಿಗಳನ್ನು ಅಗತ್ಯ ಪ್ರಮಾಣದಲ್ಲಿ ಬಳಸದೆ ಇರುವುದು.
- ಕೃಷಿಗೆ ನೆರವಾಗುವಂತೆ ಸಾಲ ಸೌಲಭ್ಯಗಳನ್ನು ನೀಡುವ ಹಣಕಾಸಿನ ಸಂಸ್ಥೆಗಳ ಸಕಾಲಿಕ ಕಾರ್ಯಾಚರಣೆ.
- ನೀರಾವರಿ ಸೌಲಭ್ಯದ ಕೊರತೆ.
- ನಗರೀಕರಣದಿಂದಾಗಿ ಕೈಗಾರಿಕೆಗಳ ಸ್ಥಾಪನೆಗೆ ಮತ್ತು ನಿವೇಶನಗಳಿಗೆ ಕೃಷಿ ಭೂಮಿಯನ್ನು ನೀಡುವುದು.
- ಮಳೆಯನ್ನೇ ಅವಲಂಬಿಸಿ ಬೇಸಾಯ ಮಾಡುವುದರಿಂದ ನೈಸರ್ಗಿಕ ವಿಕೋಪಗಳಾದಂತ ಅತಿವೃಷ್ಟಿ, ಅನಾವೃಷ್ಟಿಗಳು.
- ಇಂದಿನ ಯುವಜನತೆಯು ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಪ್ರವೃತ್ತಿಯಲ್ಲಿ ಕಡಿತ.

ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲೊಂದಾದ ನಮ್ಮ ಭಾರತ ದೇಶವು ಅಭಿವೃದ್ಧಿಶೀಲ ರಾಷ್ಟ್ರವಾಗಬೇಕೆಂದರೆ ಕೃಷಿಯಲ್ಲಿ ಆಧುನಿಕ ಪದ್ಧತಿಗಳನ್ನು ಅನುಸರಿಸುವುದು ಅವಶ್ಯಕ. ಕೃಷಿ ಕ್ಷೇತ್ರವನ್ನು ಅಭಿವೃದ್ಧಿಗೊಳಿಸದ ಹೊರತು ದೇಶದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಕೃಷಿ ಕ್ಷೇತ್ರವನ್ನು ಹೆಚ್ಚು ಬಲಪಡಿಸುವಂತಹ ಕ್ರಮಗಳು ಅಗತ್ಯ.

ಕೃಷಿ ಉತ್ಪಾದಕತೆ ಕುಂಠಿತಗೊಳ್ಳಲು ಅನೇಕ ಸಾಮಾಜಿಕ, ನೈಸರ್ಗಿಕ, ತಾಂತ್ರಿಕ, ಆರ್ಥಿಕ ಕಾರಣಗಳಿವೆ. ಈ ಎಲ್ಲಾ ತೊಡಕುಗಳನ್ನು ನಿವಾರಿಸಲು ಸರ್ಕಾರವು ಗಮನಹರಿಸಬೇಕಿದೆ.

### ಕೃಷಿ ಉತ್ಪನ್ನ ಸುಧಾರಣೆಗೆ ಅಗತ್ಯ ಕ್ರಮಗಳು

- ಅಧಿಕ ಇಳುವರಿ ನೀಡುವ ಬಿತ್ತನೆ ಬೀಜಗಳನ್ನು ಪೂರೈಕೆಯಾದರೆ ಉತ್ಪಾದನೆಯ ಮಟ್ಟ ಹೆಚ್ಚುತ್ತದೆ.
- ಯಾಂತ್ರೀಕೃತ ಮತ್ತು ವೈಜ್ಞಾನಿಕ ಬೇಸಾಯ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಿದೆ.
- ಕೀಟನಾಶಕಗಳ ಮತ್ತು ರಾಸಾಯನಿಕ ಔಷಧಿಗಳ ಬಳಕೆ ಮಾಡುವುದರಿಂದ ಉತ್ಪಾದನೆಯ ಮಟ್ಟ ಸುಧಾರಿಸುತ್ತದೆ.
- ಭಾರತದಲ್ಲಿ ಕೃಷಿಗೆ ಬೇಕಾದಂತಹ ಸಾಲ ಸೌಲಭ್ಯಗಳನ್ನು ಕಡಿಮೆ ಬಡ್ಡಿ ದರದಲ್ಲಿ ನೀಡುವುದರಿಂದ ಉತ್ತಮವಾದ ಬೇಸಾಯ ನಿರ್ವಹಣೆ ಸಾಧ್ಯವಾಗುತ್ತದೆ.
- ಕೃಷಿ ಕ್ಷೇತ್ರದಲ್ಲಿ ವ್ಯಾಪಕ ಸಂಶೋಧನೆ ನಡೆಯಬೇಕಿದೆ. ಪ್ರಯೋಗಾಲಯಗಳು, ಸಂಶೋಧನಾ ಕೇಂದ್ರಗಳ ಮೂಲಕ ಹೊಸಹೊಸ ಉಪಕರಣಗಳು, ಬಿತ್ತನೆ ಬೀಜಗಳು, ರಸಗೊಬ್ಬರಗಳು, ಯಾಂತ್ರೀಕೃತ ಬೇಸಾಯ ಅಳವಡಿಕೆಯಾದಲ್ಲಿ ಕೃಷಿಯಲ್ಲಿ ಉತ್ಪಾದನೆ ಹೆಚ್ಚುತ್ತದೆ.
- ಸಂಪ್ರದಾಯಬದ್ಧ ಹಾಗೂ ಅನಕ್ಷರಸ್ಥ ರೈತರಿಗೆ ಕೃಷಿ ಉತ್ಪಾದಕತೆಯ ಬಗ್ಗೆ ಸೂಕ್ತ ಶಿಕ್ಷಣ ಮತ್ತು ತರಬೇತಿಗಳನ್ನು ನೀಡುವುದರಿಂದ ಉತ್ಪಾದನೆಯ ಮಟ್ಟ ಹೆಚ್ಚುತ್ತದೆ.
- ನೀರಾವರಿ ಸೌಲಭ್ಯವನ್ನು ಸರಿಯಾದ ಕ್ರಮದಲ್ಲಿ ಬಳಸಿಕೊಳ್ಳುವುದರಿಂದ ಉತ್ಪಾದನೆ ಹೆಚ್ಚುತ್ತದೆ.
- ಸಹಕಾರಿ ಬೇಸಾಯದ ಅಳವಡಿಕೆಯಾಗಬೇಕಿದೆ. ಸಣ್ಣಸಣ್ಣ ತುಂಡು ಭೂಮಿಗಳನ್ನು ಒಟ್ಟು ಸೇರಿಸಿ ಸಹಕಾರಿ ಬೇಸಾಯ ಮಾಡುವುದರಿಂದ ಉತ್ಪಾದನೆ ಹೆಚ್ಚುತ್ತದೆ.

ಹೀಗೆ ಹಲವಾರು ಅಂಶಗಳನ್ನು ಅಳವಡಿಸಿಕೊಂಡು ಕೃಷಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸಬಹುದಾಗಿದೆ. ಸರ್ಕಾರ, ಸ್ವಯಂ ಸೇವಾ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು ಮತ್ತು ದೇಶದ ರೈತ ಸುಮುದಾಯ ಈ ಬಗ್ಗೆ ಗಮನಹರಿಸಿ ಮೇಲಿನ ಎಲ್ಲಾ ಅಂಶಗಳನ್ನು ಅನುಸರಿಸಿ, ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸಿದ್ದಲ್ಲಿ ರಾಷ್ಟ್ರದ ಅಭಿವೃದ್ಧಿ ಸಾಧ್ಯವಾಗುತ್ತದೆ.

ರೈತ ದೇಶದ ಬೆನ್ನೆಲುಬು ರೈತರ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಈ ಬಗ್ಗೆ ಹೆಚ್ಚಿನ ಗಮನ ಅವಶ್ಯಕ.

**– ಗೀತಾ, ಕರಾಸೌಸಂಸನಿ., ಬೆಂಗಳೂರು.**

# "ವಿಶ್ವಾಸರ್ಹತೆ ಶ್ರೀ ರಕ್ಷೆ ಸಹಕಾರ ಕ್ಷೇತ್ರದ ಅವಶ್ಯಕತೆ" – ಸಂತೋಷ್‌ಜಿ



ಒಂದು ಕೊ–ಆಪರೇಟೀವ್ ಸೊಸೈಟಿಗೆ ನಾನ್ ಷೇರ್ ಹಾಕ್ತೀನಿ ಅಂದ್ರೆ ಯಾಕ್ ಹಾಕ್ತೀನಿ ಅಂತ ಕೇಳುದ್ರೆ ಮೊದಲನೆ ದಿನ ಯಾರ್‍ದೊ ಮುಖ ನೋಡ್ಕೊಂಡು ಹಾಕ್ತೀವಿ, ಮುಖ ನೋಡೋದು ಅಂದ್ರೆನು ಅದರ ಸೌಂದರ್ಯ ನೋಡ್ಕೊಂಡು, ಬಣ್ಣ ನೋಡ್ಕೊಂಡು, ಗಾತ್ರ ನೋಡ್ಕೊಂಡು ಅಂತ ಅರ್ಥ ಅಲ್ಲ ಹಾಗಾದ್ರೆ ಯಾರ್‍ದೊ ಮುಖ ನೋಡ್‌ಕೊಂಡು ನಾನ್ ಷೇರ್ ಆಹ್ಕತೀವಿ ಅಂದ್ರೆ ಏನ್ ಅರ್ಥ ಅಂತ ಕೇಳಿದ್ರೆ ಅವರ ಕ್ರೆಡಿಬಲಿಟಿ ನೋಡ್ಕೊಂಡು ಆಧಾರದ ಮೇಲೆ ನಾನು ಷೇರ್‌ಅನ್ನ ಹಾಕ್ತೀನಿ ಇವತ್ತು ಆತರ ಸಾವಿರಾರು ಸೊಸೈಟಿಗಳು ಇಡೀ ದೇಶದಲ್ಲಿ ನಡಿತಾ ಇದೆ.

ಈ ದೇಹದಲ್ಲಿ ಎರಡು ಮಸಲ್ಸ್ ಇದೆ, ಒಂದು ವಾಲಂಟರಿ, ಮತ್ತೊಂದು ಇನ್ವಾಲಂಟರಿ ಮಸಲ್ಸ್ ಅಂತ ಇದೆ. ನೀವು ಕೈ ಅಲ್ಲಾಡಿಸ್‌ದೆ ಇರೋಕಾಗೊಲ್ಲ ಆದರೆ ಹೊಟ್ಟೆ ತನ್ನ ಪಾಡಿಗೆ ತಾನು ಹೊಡ್‌ಕೊಳ್ಳೊಕೆ ಶುರು ಮಾಡುತ್ತೆ. ಅದು ಅಲ್ಲಿಂದ ಮುಖದಲ್ಲಿ ವ್ಯಕ್ತ ಆಗುತ್ತ ಹೋಗುತ್ತೆ ಅದುನ್ನ ಯಾರು ಅಡಗಿಸಿಕೊಳ್ಳೊ ಪ್ರಯತ್ನ ಮಾಡೊಕ್ಕೆ ಹೋಗಬೇಡಿ, ಸಹಜ ಪ್ರಕ್ರಿಯೆಗಳನ್ನು ಅಡಗಿಸಿಕೊಳ್ಳೊಕೆ ಹೋಗ್ ಬಾರ್‍ದು, ಅದ್ರಲ್ಲೂ ಭಾಷಣಕ್ಕೋಸ್ಕರ ಅಂತು ಖಂಡಿತ ಅಡಗಿಸಿಕೊಳ್ಳೊಕೆ ಹೋಗ್‌ಬಾರ್‍ದು.

ಒಂದು ಕೋ–ಆಪ್‌ರೇಟೀವ್ ಸೊಸೈಟಿ, ಒಂದು ಸಹಕಾರಿ ಸಂಸ್ಥೆಯ ಸಭೆಯಲ್ಲಿ ಜನ ಬರಬೇಕು ಅಂದ್ರೆನೆ ಬಹಳ ದೊಡ್ಡ ಕಷ್ಟದ ಕೆಲಸ. ಸದಸ್ಯರು ಬರಬೇಕು ಅಂದ್ರೆನೆ ನಾನು ಹಲವಾರು ಸೊಸೈಟಿಗಳನ್ನು ನಾನು ಹತ್ತಿರದಿಂದ ನೋಡಿದಿನಿ, ಸಭೆಗೆ ಹೋಗಿರೋದು ಇವತ್ತೆ ಮೊದಲು. ಅದರ ಬಗ್ಗೆ ತುಂಬ ಆಸಕ್ತಿ ಇರುತ್ತೆ ಅಂತ ಏನು ಇಲ್ಲ. ಎರಡು ಕಾರಣಕ್ಕೆ ಆಸಕ್ತಿ ಇರೋದಿಲ್ಲ ಎರಡು ಕಾರಣಕ್ಕೆ ಷೇರ್ ತಗೊಂಡಿರ್‍ತಾರೆ ನಾನು ಹಲವಾರು ಸೊಸೈಟಿಗಳನ್ನು ನಾನು ಹತ್ತಿರದಿಂದ ನೋಡಿದಿನಿ ಒಂದು ತುಂಬ ಒತ್ತಾಯ ಮಾಡಿ ಷೇರ್ ತಗೊಂಡಿರ್‍ತಾರೆ ಡೈರೆಕ್ಟರ್‌ಗಳು ಮೊದಲನೆಯದು. ಎರಡನೆಯದು ರಾಜಕಾರಣಿಗಳ ಥರ ಷೇರ್ ತಗೊಂಡ್ ಮೇಲೆ ಸದಸ್ಯರನ್ನ ಮರತುಬಿಡೋ ಅಂತ ಡೈರೆಕ್ಟರ್‌ಗಳ ಸಂಖ್ಯೆನೆ ದೊಡ್ಡದು. ಓಟ್ ತಗೊಳೊವರ್ಗೆ ದೇವ್ರು, ಓಟ್ ತಗೊಂಡ್ ಮೇಲೆ ಇವ್ರೆ ದೊಡ್ಡ ಜನ ಅನ್ನೊ ಅಂತ ರೀತಿಯಲ್ಲಿ.

ಹಾಗೆ ಈ ಥರದ ತುಂಬ ಸೊಸೈಟಿಗಳ್ ನಡಿತಾ ಇರೊ ಅಂತ ಕಾಲದಲ್ಲಿ ಪಾವಗಡ ಸೌಹಾರ್ದ ಸೊಸೈಟಿ, ಬೆಂಗಳೂರಿನಲ್ಲಿ ಇರೋದು ಹಳ್ಳಿಗೋಗೋದು ನನಗೆ ಬಹಳ ಚೆನ್ನಾಗಿ ಗೊತ್ತು. ಯಾಕೆಂದ್ರೆ ಬೆಂಗಳೂರಿನಲ್ಲಿ ಒಂದು ಪ್ರೊಫೆಷನಿಸಂ ಇದೆ, ತಾಕತ್ತಿದೆ, ಒಂದು ಸಾಮರ್ಥ್ಯ ಇದೆ. ಅದರೆ ಒಂದು ಪುಟ್ಟದಾಗಿರತಕ್ಕಂತ ಪಟ್ಟಣದಲ್ಲಿ, ಅದು ನೀರೆ ಇಲ್ದೆ ಇರೋ ಅಂತ ಊರಲ್ಲಿ, ಬರಗಾಲದಂತ ಒಂದು ನಾಡಲ್ಲಿ, ಪ್ರಾರಂಭ ಆಗಿರುವಂತ ಒಂದು ಸೊಸೈಟಿ, ಅದು ಬೆಂಗಳೂರಿನಂತ ಒಂದು ಮಹಾನಗರಕ್ಕೆ ಬರುತ್ತೆ ಅಂದ್ರೆ, ಅದು ಅಂತಿಂತ ಏರಿಯಾಗಳಲ್ಲಲ್ಲ, ಎಚ್‌ಎಸ್‌ಆರ್ ಲೇಔಟ್‌ನಲ್ಲಿ, ಬಿಟಿಎಂ ಲೇಔಟ್‌ನಲ್ಲಿ, ಸಹಕಾರ ನಗರದಂತ ಮುಂದುವರೆದ ಲೊಕ್ಯಾಲಿಟಿಗಳಲ್ಲಿ ಸೊಸೈಟಿಗಳನ್ನು ಪ್ರಾರಂಭ ಮಾಡುತ್ತೆ, ಮತ್ತು ಪ್ರತಿ ವರ್ಷ ಒಂದೊಂದು ಸೊಸೈಟಿಗಳನ್ನು ಪ್ರಾರಂಭಿಸುತ್ತೆ, ಪ್ರಾರಂಭ ಮಾಡಿರೊ ಎಲ್ಲ ಸೊಸೈಟಿಗಳನ್ನು ತುಂಬ ಚೆನ್ನಾಗಿ ನಡೆಸುತ್ತೆ ಅನ್ನುವಂತದ್ದು, ನಾನು ಅಂದ್ಕೊತೀನಿ ಅದು ತುಂಬ ಅಭಿಮಾನದ ಸಂಗತಿ ಆಕಾರಣಕ್ಕೆ ಅದರ ಎಲ್ಲ ನಿರ್ದೇಶಕರಿಗೆ, ಮತ್ತು ಅದರ ಎಲ್ಲ ಸದಸ್ಯರಿಗೆ, ಜೊತೆಗೆ ಅದರ ಎಲ್ಲ ಸಿಬ್ಬಂದಿ ವರ್ಗಕ್ಕೆ ನಾನು ನನ್ನ ಮಾತುಗಳ ಪ್ರಾರಂಭದಲ್ಲಿ ನಾನು ನನ್ನ ಅಭಿನಂದನೆಗಳನ್ನ ಸಲ್ಲಿಸಲಿಕ್ಕೆ ಬಯಸುತ್ತೇನೆ.

ಯಾಕೆಂದ್ರ ಇವತ್ತು ಗ್ರಾಹಕ ಪ್ರದಾನವಾಗಿರತಕ್ಕಂತ ಜಗತ್ತಿವತ್ತು, ಇವತ್ತು ಕನ್ಸೂಮರಿಸಮ್ ಇದೆ, ಒಂದರ್ಥದಲ್ಲಿ ಅದುಒಳ್ಳೆಯದು, ನಾನು ಆಮೇಲೆ ಇನ್ನೊಂದ ಕನ್ಸೂಮರಿಸಂ ಬಗ್ಗೆ ಬರ್ತಿನಿ ಆದರೆ ಅದು ಸರಿಇಲ್ಲ, ನನಗೆ ಇಷ್ಟ ಇಲ್ಲ. ಆದರೆ ಒಂದರ್ಥದಲ್ಲಿ ಕನ್ಸೂಮರ್ ದೇವರು ಇವತ್ತು ಗ್ರಾಹಕ ದೇವ್ರು, ಅವನಿಗೆ ಅಪ್‌ಷನ್‌ಗಳು ತುಂಬ, ಇದೆ ಆಯ್ಕೆಗಳು ತುಂಬ ಇದೆ, ಒಂದು ಕಡೆಯಿಂದ ರಾಷ್ಟ್ರೀಕೃತ ಬ್ಯಾಂಕ್‌ಗಳಿದೆ, ಇನ್ನೊಂದ್ ಕಡೆಯಿಂದ ಮಲ್ಟಿನ್ಯಾಷನಲ್ ಬ್ಯಾಂಕ್‌ಗಳಿದಾವೆ, ಮನೆಗೆ ಬಂದು ಎಲ್ಲವನ್ನು ನೋಡತಕ್ಕಂತ ನಿಮ್ಮತ್ರ ಕಂಪ್ಯೂಟರ್ ಇದ್ರೆ ಬ್ಯಾಂಕಿನ ಮುಖನೆ ನೋಡ್ದೆ ಇರತಕ್ಕಂತ ಅಗತ್ಯನೆ ಇಲ್ದೆ ಇರೊ ದಿನಗಳಲ್ಲಿ ಒಂದು ಪುಟ್ಟದಾಗಿರ್‌ತಕ್ಕಂತ ಊರಲ್ಲಿ ಪ್ರಾರಂಭ ಆಗಿರತಕ್ಕಂತ ಸೊಸೈಟಿ ಕೇವಲ ಕ್ರೆಡಿಬಲಿಟಿ ಆಧಾರದ ಮೇಲೆ ಪಾವಗಡ ಸೊಸೈಟಿಗೆ ಮತ್ತು ಈತರದ ಸಾವಿರಾರು ಸೊಸೈಟಿಗಳಿಗೆ ಆಧಾರ ಏನಪ್ಪ ಅಂತ ಕೇಳಿದ್ರೆ ನನ್ನ ಪಕ್ಕದಲ್ಲಿ ಕೂತ ಶಿವಪ್ರಸಾದ್ ಅತ್ರ ಕೇಳ್‌ತಾ ಇದ್ದೆ ನಮಿಗೆ ಯಾರಾದ್ರ ಗ್ಯಾರಂಟಿ ಇದಾರ ಅಂತ ಕೇಳ್ತಾ ಇದ್ದೆ, ಗೌರ್‌ಮೆಂಟ್ ಏನಾದ್ರು ಗ್ಯಾರಂಟಿ ಇದ್ಯಾ ಅಂತ ಕೇಳ್ದೆ.

19ನೇ ಪುಟಕ್ಕೆ...

# ಸಹಕಾರಿಗಳ ಗುಣಮಟ್ಟ ನಿರ್ವಹಣೆ ಅತ್ಯಗತ್ಯ – ಎಸ್.ಆರ್. ಸತೀಶ್‌ಚಂದ್ರ

## ಉಡುಪಿಯಲ್ಲಿ ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರ್ವಹಣೆ ತರಬೇತಿ ಕಾರ್ಯಕ್ರಮ



ಸಂಯುಕ್ತ ಸಹಕಾರಿ ರಾಜ್ಯದ ಎಲ್ಲ ಭಾಗಗಳಲ್ಲಿ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಉಡುಪಿ ಜಿಲ್ಲೆಯಲ್ಲಿ 40ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳು ಉತ್ತಮ ಗುಣಮಟ್ಟದಲ್ಲಿ ಕಾರ್ಯನಿರ್ವಹಿಸಲು ಅಗತ್ಯವಾದ ಮಾಹಿತಿಯನ್ನು ಒದಗಿಸುವುದು ಈ ತರಬೇತಿಯ ಮುಖ್ಯ ಉದ್ದೇಶವಾಗಿದೆ ಎಂದು ಸಂಯುಕ್ತ ಸಹಕಾರಿಯ ಉಡುಪಿ ಜಿಲ್ಲೆಯ ನಿರ್ದೇಶಕರಾದ ಶ್ರೀ ಭಾಸ್ಕರ್ ಕಾಮತ್‌ರವರು ತಿಳಿಸಿದರು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ವೇಗ ದಿನೇ ದಿನೇ ಹೆಚ್ಚುತ್ತಲಿದ್ದು, ಸಂಖ್ಯೆಯ ಬೆಳವಣಿಗೆಯ ಜೊತೆಗೆ ಪ್ರಸ್ತುತ ಸಹಕಾರಿಗಳ ಗುಣಮಟ್ಟ ನಿರ್ವಹಣೆ ಅತ್ಯಗತ್ಯವಾಗಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್‌ಚಂದ್ರ ತಿಳಿಸಿದರು.

ಸಂಯುಕ್ತ ಸಹಕಾರಿಯ ಹಾಗೂ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ವತಿಯಿಂದ ನವೆಂಬರ್ 3ರಂದು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗಾಗಿ ಗುಣಮಟ್ಟ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರಿಗಳ ಗುಣಮಟ್ಟ ನಿರ್ವಹಣೆ ಹಿನ್ನಲೆಯಲ್ಲಿ ಸಂಯುಕ್ತಯ ಸಹಕಾರಿಯು ಇಂತಹ ತರಬೇತಿ ಕಾರ್ಯಕ್ರಮಗಳನ್ನು ಆಗಿಂದ್ದಾಗೆ ಏರ್ಪಡಿಸುತ್ತಲಿದೆ. ಸಹಕಾರಿ ಕ್ಷೇತ್ರದ ಸಮಗ್ರ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ, ಪ್ರಸಕ್ತ ವಿದ್ಯಮಾನಗಳು, ಸಾಧನೆಗಳ ಬಗ್ಗೆ ಮಾಹಿತಿ ಇದ್ದಲ್ಲಿ ತಮ್ಮ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಸಹ ಇನ್ನೂ ಹೆಚ್ಚು ವಿಸ್ತರಿಸಬಹುದು. ಜಾಗೃತಗೊಳಿಸಬಹುದು, ಸಾಧನೆ ಮಾಡಬಹುದು ಎಂದರು.

ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಡುಪಿ ತಾಲ್ಲೂಕಿನ ಇಂಡಸ್ಟ್ರೀಯಲ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷರಾದ ಶ್ರೀ ಅಲೇವೂರು ಶ್ರೀಧರ ಶೆಟ್ಟಿಯವರು ವಹಿಸಿ ತರಬೇತಿ ಕಾರ್ಯಕ್ರಮದಿಂದ ಅನೇಕ ಉತ್ತಮ ವಿಷಯಗಳನ್ನು ತಿಳಿಯಲು ಅವಕಾಶವಾಗುತ್ತಿದೆ ಎಂದು ಅಭಿಪ್ರಾಯಿಸಿದರು.

ಸಂಯುಕ್ತ ಸಹಕಾರಿಯ ಉಡುಪಿ ಜಿಲ್ಲೆಯ ನಿರ್ದೇಶಕರಾದ ಶ್ರೀ ಭಾಸ್ಕರ್ ಕಾಮತ್‌ರವರು ಸ್ವಾಗತ ಕೋರಿ, ಸಂಯುಕ್ತ ಸಹಕಾರಿ ರಾಜ್ಯದ ಎಲ್ಲಿ ಭಾಗಗಳಲ್ಲಿ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಉಡುಪಿ ಜಿಲ್ಲೆಯಲ್ಲಿ 40ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳು ಉತ್ತಮ ಗುಣಮಟ್ಟದಲ್ಲಿ ಕಾರ್ಯನಿರ್ವಹಿಸಲು ಅಗತ್ಯವಾದ ಮಾಹಿತಿಯನ್ನು ಒದಗಿಸುವುದು ಈ ತರಬೇತಿಯ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಶ್ರೀ ಶಿವಕುಮಾರರವರು ವಂದನೆ ಸಲ್ಲಿಸಿದರು ಕಾರ್ಯಕ್ರಮದಲ್ಲಿ ಶ್ರೀ ಸಿ.ಎನ್. ಪರಶಿವಮೂರ್ತಿಯವರು 97 ನೇ ಸಂವಿಧಾನದ ತಿದ್ದುಪಡಿಯ ನಂತರ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಆಗಬಹುದಾದ ತಿದ್ದುಪಡಿಗಳು, ಶ್ರೀ ಭಾಸ್ಕರ್ ಹೆಗಡೆ ಕಾಗೇರಿಯವರು ಸಹಕಾರಿಯ ಆಡಳಿತ ಮಂಡಳಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಶಾಸನ ಬದ್ಧ ಕಾರ್ಯಗಳು ಶ್ರೀಮತಿ ಸುಧಾ ಹೆಗಡೆಯವರು ಗುಣಮಟ್ಟ ನಿರ್ವಹಣೆಯ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯ 35 ಸೌಹಾರ್ದ ಸಹಕಾರಿಗಳಿಂದ 75 ಪ್ರತಿನಿಧಿಗಳು ಭಾಗವಹಿಸಿದ್ದರು.



# ಪರಿಣಾಮಕಾರಿ ಸಂವಹನ

– ಬಿ.ಎ. ಮಹದೇವಪ್ಪ
ಅಪರ ನಿಬಂಧಕರು.



...ಹಿಂದಿನ ಸಂಚಿಕೆಯಿಂದ

**ಸಂವಹನದಲ್ಲಿ ಕೇಳುವಿಕೆ :**

ಪ್ರಕೃತಿ ನಮಗೆ ಎರಡು ಕಿವಿಗಳನ್ನು, ಎರಡು ಕಣ್ಣುಗಳನ್ನು ಆದರೆ ಒಂದೇ ನಾಲಿಗೆಯನ್ನು ಕೊಟ್ಟಿದೆ, ಅಂದರೆ ಹೆಚ್ಚು ಕೇಳಬೇಕು, ಹೆಚ್ಚು ನೋಡಬೇಕು, ಅಗತ್ಯವಿದ್ದಷ್ಟೇ ಮಾತನಾಡಬೇಕು ಎನ್ನುವದನ್ನು ಇದು ಸೂಚಿಸುತ್ತದೆ. ನಾವು ಮಾತನಾಡುವುದಕ್ಕಿಂತ ಹೆಚ್ಚಾಗಿ ಕೇಳಿಸಿಕೊಳ್ಳಬೇಕು, ಹೆಚ್ಚಿನವರಿಗೆ ಮಾತನಾಡುವಲ್ಲಿ ಇರುವ ಕಾತರ ಕೇಳಿಸಿಕೊಳ್ಳುವುದರಲ್ಲಿ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಸಂವಹನ ದುರ್ಬಲವಾಗುತ್ತದೆ. ಚೆನ್ನಾಗಿ ಕೇಳಿಸಿಕೊಂಡು ಅರ್ಥ ಮಾಡಿಕೊಂಡವರು ಎಂತಹ ಪರಿಸ್ಥಿತಿಯನ್ನೂ ನಿಭಾಯಿಸಬಲ್ಲರು. ಸೇನೆಯಲ್ಲಿ ಲಿಸನ್ ಪೋಸ್ಟ್ ಎಂಬ ಪ್ರತ್ಯೇಕ ವಿಭಾಗವೇ ಇದೆ. ಇಲ್ಲಿ ಶಬ್ದಗಳಿಂದಲೇ ಶತ್ರುಗಳ ಚಲನ–ವಲನಗಳನ್ನು ಪತ್ತೆ ಮಾಡುವುದರ ಬಗ್ಗೆ ತಿಳಿಸಲಾಗುತ್ತದೆ. ಕೇಳುವಿಕೆಯ ಕುರಿತಂತೆ ಐದು ವಿಧಗಳನ್ನು ನೋಡಬಹುದು,

1. **ನಿರ್ಲಿಪ್ತತೆ** : ಶರೀರ ಇಲ್ಲೇ ಇದ್ದರೂ ಮನಸ್ಸು ಎಲ್ಲೋ ಇರುತ್ತದೆ.
2. **ಕೇಳುತ್ತಿರುವಂತೆ ನಟಿಸುವುದು** : ಇಲ್ಲಿ ಕೇಳುವುದೇ ನಡೆಯುವುದಿಲ್ಲ.
3. **ಬೇಕಾದದ್ದನ್ನು ಮಾತ್ರ ಕೇಳುವುದು** : ವಿವರಗಳಿಗೆ ಅವಕಾಶವಿಲ್ಲ, ಅರ್ಧ ಕೇಳುವಿಕೆ ನಡೆಯುತ್ತದೆ.
4. **ಶ್ರದ್ಧೆಯಿಂದ ಕೇಳುವುದು** : ಕೇಳುವಷ್ಟು ಹೊತ್ತು ಎದುರು ವ್ಯಕ್ತಿಯ ಅಭಿಪ್ರಾಯಗಳನ್ನು ನಮ್ಮ ಅಭಿಪ್ರಾಯಗಳ ಜೊತೆ ಹೋಲಿಕೆ ಮಾಡುವುದು.
5. **ನಿಜವಾಗಿಯೂ ಕೇಳುವುದು** : ಕೇವಲ ಕಿವಿಯಿಂದ ಅಲ್ಲದೆ ಕಣ್ಣಿನಿಂದ, ಮನಸ್ಸಿನಿಂದಲೂ ಕೇಳಿ ಎದುರು ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವುದೇ ನಿಜವಾದ ಕೇಳುವಿಕೆ.

ಹೆಚ್ಚಿನವರು ಮಾಡುವ ತಪ್ಪು ಏನೆಂದರೆ ಕೇಳಿಸಿಕೊಳ್ಳುವುದು ಅರ್ಧ, ಅರ್ಥ ಮಾಡಿಕೊಳ್ಳುವುದು ಕಾಲು ಭಾಗ, ಯೋಚಿಸುವುದು ಶೂನ್ಯ. ಆದರೆ ಪ್ರತಿಕ್ರಿಯಿಸುವುದು ಮಾತ್ರ ಎರಡು ಪಟ್ಟು. ಹಾಗೆಯೇ ನೋಟದಲ್ಲಿನ ಗ್ರಹಿಕೆಗಳೂ ಭಿನ್ನವಾಗಿರುತ್ತವೆ. ಕಣ್ಣುಗಳು ವಸ್ತುವನ್ನು ನೋಡುತ್ತವೆ. ಮನಸ್ಸು ಅದನ್ನು ಅರ್ಥಮಾಡಿಕೊಳ್ಳುತ್ತದೆ. ಆದರೆ ಕಣ್ಣು ನೋಡಿದ್ದನ್ನು ಮನಸ್ಸು ನಿಜವಾಗಲೂ ಅರ್ಥಮಾಡಿಕೊಳ್ಳುತ್ತದೆಯೇ? ಸಂವಹನದ ಸಂದರ್ಭಕ್ಕನುಸಾರವಾಗಿ ನಮ್ಮ ಮನಸ್ಥಿತಿಗನುಗುಣವಾಗಿ ನೋಟದ ಗ್ರಹಿಕೆಗಳು ರೂಪಗೊಳ್ಳುತ್ತವೆ. ಕೇಳುವಿಕೆಯನ್ನು ಮಾಡದಿದ್ದಾಗ, ಒಂದು ನಗುವಿನ ಸುತ್ತದ ನೋಟದ ಗ್ರಹಿಕೆಗಳನ್ನ ಹೇಳುವ ರಾಮಾಯಣದ ಒಂದು ಉದಾಹರಣೆ ನೋಡಿ:



> ಒಂದು ಸಂಸ್ಥೆಯ ಕೆಲಸಗಾರರು ಏನು ಮಾಡಬೇಕು; ಅವರು ಹೇಗೆ ಕೆಲಸ ಮಾಡುತ್ತಿದ್ದಾರೆ ಎನ್ನುವುದರ ಮೇಲ್ವಿಚಾರಣೆ ಆಡಳಿತ ಮಂಡಳಿಯದು. ಆಡಳಿತ ಮಂಡಳಿ ಮತ್ತು ನೌಕರರ ನಡುವೆ ಸಮನ್ವಯ ಮತ್ತು ಹಣಕಾಸು ವ್ಯವಹಾರಗಳ ನಿಯಂತ್ರಣ ಮತ್ತು ಲಾಭದಾಯಕತೆ ಇವೆಲ್ಲವೂ ಉತ್ತಮ ಸಂವಹನದ ಆಧಾರದ ಮೇಲೆ ನಿಂತಿವೆ.

ರಾಮಾಯಣದ ಒಂದು ಪ್ರಸಂಗ, ರಾವಣನ ವಧೆಯ ನಂತರ ರಾಮ, ಲಕ್ಷ್ಮಣ, ಸೀತೆ ಹನುಮಂತ ಎಲ್ಲರೂ ಅಯೋಧ್ಯೆಗೆ ಬರುತ್ತಾರೆ. ಭರತ – ಶತೃಘ್ನರು ಅವರನ್ನು ಪ್ರೀತಿಯಿಂದ ಸ್ವಾಗತಿಸುತ್ತಾರೆ. ಎಲ್ಲರೂ ಆನಂದದಿಂದ ಇರುವಾಗ ಇದ್ದಕ್ಕಿದ್ದಂತೆ ಲಕ್ಷ್ಮಣ ತನ್ನೊಳಗೆ ತಾನೇ ನಗುತ್ತಾನೆ.

**ಕೈಕೇಯಿ** : "ಅಂದು ರಾಮನನ್ನು ಕಾಡಿಗೆ ಕಳುಹಿಸಿ ಪತಿಯ ಸಾವಿಗೆ ಕಾರಣಳಾದ ನೀನು ಈ ದಿನ ರಾಮನನ್ನು ಸ್ವಾಗತಿಸುತ್ತಿದ್ದೀಯಾ!" ಎಂದು ಲಕ್ಷ್ಮಣ ಪರಿಹಾಸ ಮಾಡುತ್ತಿದ್ದಾನೆ ಎಂದುಕೊಳ್ಳುತ್ತಾಳೆ.

**ಸುಗ್ರೀವ** : "ಅಣ್ಣನನ್ನು ಮೋಸದಿಂದ ಕೊಂದು, ರಾಜ್ಯವನ್ನು ಸಂಪಾದಿಸಿ, ರಾಮನ ಜೊತೆ ಆನಂದದಿಂದ ಇದ್ದೀಯ" ಎಂದು ಲಕ್ಷ್ಮಣ ನನ್ನನ್ನು ನೋಡಿ ನಗುತ್ತಿದ್ದಾನೆ ಎಂದುಕೊಳ್ಳುತ್ತಾನೆ.

**ವಿಭೀಷಣ** : "ಮನೆಯ ಗುಟ್ಟನ್ನು ರಾಮನಿಗೆ ಹೇಳಿ ಲಂಕೆಗೆ ಕೇಡು ಬಗೆದು ಅಣ್ಣನನ್ನು ಕೊಲ್ಲಿಸಿ ಲಂಕಾ ಪಟ್ಟಣಕ್ಕೆ ರಾಜನಾಗಿರುವುದು ಸರಿಯೆ?" ಎಂದು ಲಕ್ಷ್ಮಣ ನನ್ನ ಬಗ್ಗೆ ನಗುತ್ತಿರಬಹುದೆ ಎಂದು ಯೋಚಿಸುತ್ತಾನೆ.

**ರಾಮ** : "ಸೀತೆ ಚಿನ್ನದ ಜಿಂಕೆ ಕೇಳಿದಾಗ ಅದು ರಾಕ್ಷಸರ ಮಾಯೆ ಎಂದು ಗೊತ್ತಿದ್ದರೂ

ಸೀತೆಗೆ ತಿಳಿ ಹೇಳದೇ ಚಿನ್ನದ ಜಿಂಕೆಯ ಹಿಂದೆ ಹೋದದ್ದು ಬುದ್ಧಿವಂತರ ಲಕ್ಷಣವಲ್ಲ" ಎಂದು ಲಕ್ಷ್ಮಣ ನನ್ನ ಬಗ್ಗೆ ನಗುತ್ತಿದ್ದಾನಾ ಎಂದು ಗ್ರಹಿಸುತ್ತಾನೆ.

**ಸೀತೆ :** "ರಾಮ ಚಿನ್ನದ ಜಿಂಕೆ ತರಲು ಹೋದಾಗ ಮೂರು ಗೆರೆಗಳನ್ನು ದಾಟಿ ಹೊರಗೆ ಬರಬೇಡ ಎಂದು ಹೇಳಿದ್ದರೂ ನನ್ನ ಮಾತು ಕೇಳದೆ ಬಂದಿದ್ದಕ್ಕೆ ತಾನೇ ರಾಮ – ರಾವಣರ ಯುದ್ಧಕ್ಕೆ ಕಾರಣ" ಎಂದು ಲಕ್ಷ್ಮಣ ನನ್ನನ್ನು ನೋಡಿ ನಗುತ್ತಿರಬಹುದು ಎಂದುಕೊಳ್ಳುತ್ತಾಳೆ. ಹೀಗೆ ಅವರುಗಳು ನಗುವೆಂಬ ಸಂವಹನದ ಕಾರಣದಿಂದ ನೋಟ ಉಂಟು ಮಾಡಿದ ಗ್ರಹಿಕೆಗಳಲ್ಲಿ ಆಲೋಚಿಸುತ್ತಿರುವಾಗ,

**ಕೌಸಲ್ಯೆ :** ಯಾಕಪ್ಪ ಹಾಗೆ ನಗುತ್ತಿದ್ದೀಯ? ಇಷ್ಟು ಮಂದಿಯಲ್ಲಿ ನೀನು ಯಾರನ್ನು ನೋಡಿ ನಗುತ್ತಿದ್ದೀಯ? ಎಂದು ಲಕ್ಷ್ಮಣನನ್ನು ಕೇಳುತ್ತಾಳೆ.

**ಲಕ್ಷ್ಮಣ :** "ನಾನು ನಕ್ಕಿದ್ದು ಇಲ್ಲಿರುವವರನ್ನು ನೋಡಿ ಅಲ್ಲಮ್ಮ. ಹದಿನಾಲ್ಕು ವರ್ಷ ವನವಾಸ ಮಾಡಿದೆ. ಆ ಸಮಯದಲ್ಲಿ ಯಾವತ್ತೂ ನನ್ನ ಹತ್ತಿರಕ್ಕೆ ಬಾರದ ನಿದ್ರೆ ಈ ದಿನ ಇಷ್ಟು ಆನಂದದ ಸಮಯದಲ್ಲಿ ಒತ್ತರಿಸಿ ಬರುತ್ತಿದೆ, ಅದಕ್ಕಾಗಿ ನಗು ಬಂತು" – ಎನ್ನುತ್ತಾನೆ.

**ಸಹಕಾರ ಸಂಸ್ಥೆಗಳಲ್ಲಿ ಪರಿಣಾಮಕಾರಿ ಸಂವಹನ :**

ಸಹಕಾರ ಸಂಸ್ಥೆಗಳೆಂದರೆ ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಒಂದು ವ್ಯಾವಹಾರಿಕ ಸಂಸ್ಥೆ. ವ್ಯವಹಾರ ಎಂದರೆ Business, Business means people, ಅಧ್ಯಕ್ಷರಿಂದ ಕೊನೆಯ ನೌಕರನವರೆಗೆ – ಸದಸ್ಯರಿಂದ ಗ್ರಾಹಕರವರೆಗೆ ಜನ, ಜನ ಬರೀ ಜನ. ಸಂಸ್ಥೆಯ ಯಶಸ್ಸು ಈ ಜನರ ಪರಸ್ಪರ ವಿಶ್ವಾಸ ಮತ್ತು ನಂಬಿಕೆಯ ಮೇಲೆ ನಿಂತಿದೆ. ಸಹಕಾರ ಸಂಘಗಳ ಕಾರ್ಯನಿರ್ವಹಣೆ ಅಷ್ಟು ಸುಲಭವಲ್ಲ. ಸಂಸ್ಥೆಯ ಎಲ್ಲರೂ ಸೈನಿಕರಂತೆ ಕೆಲಸ ಮಾಡಬೇಕು. ಸದಸ್ಯರ ಅವಶ್ಯಕತೆಗಳಿಗೆ ತಕ್ಕಂತೆ ಸಂಘದ ವ್ಯವಹಾರವನ್ನು ರೂಪಿಸಿ ಕೊಳ್ಳಬೇಕು. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಸೇವೆಯನ್ನು ನೀಡಿ ಸ್ಪರ್ಧೆಯಲ್ಲಿ ಉಳಿಯಬೇಕು.

ಒಂದು ಸಂಸ್ಥೆಯ ಕೆಲಸಗಾರರು ಏನು ಮಾಡಬೇಕು; ಅವರು ಹೇಗೆ ಕೆಲಸ ಮಾಡುತ್ತಿದ್ದಾರೆ ಎನ್ನುವುದರ ಮೇಲ್ವಿಚಾರಣೆ ಆಡಳಿತ ಮಂಡಳಿಯದು. ಆಡಳಿತ ಮಂಡಳಿ ಮತ್ತು ನೌಕರರ ನಡುವೆ ಸಮನ್ವಯ ಮತ್ತು ಹಣಕಾಸು ವ್ಯವಹಾರಗಳ ನಿಯಂತ್ರಣ ಮತ್ತು ಲಾಭದಾಯಕತೆ ಇವೆಲ್ಲವೂ ಉತ್ತಮ ಸಂವಹನದ ಆಧಾರದ ಮೇಲೆ ನಿಂತಿವೆ. ಆಡಳಿತ ಮಂಡಳಿ ಸಭೆಗಳ ಮೂಲಕ ನಿರ್ದೇಶಕರಿಗೆ, ಮಹಾಸಭೆಗಳ ಮೂಲಕ ಸದಸ್ಯರಿಗೆ, ಆಡಿಟ್ ವರದಿ ಮೂಲಕ ರಾಜ್ಯ ಸಂಸ್ಥೆಗೆ, ಠೇವಣಿದಾರರಿಗೆ, ಸಾರ್ವಜನಿಕರಿಗೆ ಮತ್ತು ಇಲಾಖೆಗೆ ಸಂಘದಲ್ಲಿ ಏನು ನಡೆಯುತ್ತಿದೆ ಎಂಬುದು ತಿಳಿಯುವಂತಾಗಬೇಕು. ಇದನ್ನೇ ಪರಿಣಾಮಕಾರಿ ಸಂವಹನ ಎನ್ನಬಹುದಾಗಿದೆ.

ಸಾಮಾನ್ಯವಾಗಿ ಮೇಲಿನ ಕಚೇರಿಗಳಿಂದ ಬರುವ ಪತ್ರ ಮತ್ತು ಸುತ್ತೋಲೆಗಳನ್ನು ಚೆನ್ನಾಗಿ ಓದಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸದಿದ್ದಾಗ, ಗ್ರಾಹಕರೊಂದಿಗೆ ಹೇಗೆ ವ್ಯವಹರಿಸಬೇಕು



ಎಂಬುದನ್ನು ಸರಿಯಾಗಿ ತಿಳಿದಿಲ್ಲದಿರುವಾಗ ಸಂವಹನ ವಿಫಲಗೊಳ್ಳುತ್ತದೆ.


**ಒಂದು ಉದಾಹರಣೆ ಗಮನಿಸಿ :** ಠೇವಣಿದಾರ ಮರಣ ಹೊಂದಿದ ಸಂದರ್ಭದಲ್ಲಿ, ಒಂದು ಶಾಖೆಯಿಂದ ಅವರ ಕುಟುಂಬಕ್ಕೆ ಕಳುಹಿಸಿದ ಪತ್ರದಲ್ಲಿ "ದಯವಿಟ್ಟು ನಿಮ್ಮ ಸರಿಯಾದ ತಂದೆಯ ಹೆಸರನ್ನು ತಿಳಿಸಿ" ಎಂದು ಕೇಳಲಾಗಿತ್ತು. ಇದು ಸರಿಯಾದ ಸಂವಹನವೇ?

ಎಷ್ಟೋ ಬಾರಿ ಸಂವಹನ ನಮ್ಮ ಆಸಕ್ತಿಯನ್ನ ಅವಲಂಬಿಸಿರುತ್ತದೆ. ಉದಾಹರಣೆಗೆ ಟೆಲಿಫೋನ್ ಇನ್ನೂ ಬಳಕೆಗೆ ಬಂದಿರದ ಕಾಲ ಅದು. ಅಮೆರಿಕಾದ ಒಂದು ಕಾರ್ಖಾನೆಯಲ್ಲಿ ಹೊಸ ಯಂತ್ರದ ಖರೀದಿ ಮಾಡಲಾಯಿತು. ಅದು ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ವಿವರಿಸಿ ಛೇರಮನ್‌ರವರು ಪತ್ರ ಬರೆದರು. ಅದು ಕೆಲಸಗಾರರಿಗೆ ತಲುಪಲು 23 ದಿನಗಳು ಬೇಕಾಯಿತು. ಆದರೆ, ಛೇರಮನ್ ತನ್ನ ಸೆಕ್ರೆಟರಿಯನ್ನು ಚುಂಬಿಸಿದ ವಿಷಯ ಸಂಜೆಯೊಳಗೆ ಎಲ್ಲ ಕೆಲಸಗಾರರಿಗೆ ತಲುಪಿತು. ಒಬ್ಬೊಬ್ಬ ವ್ಯಕ್ತಿ ನಾಲ್ಕು ಜನರಿಗೆ ಹೇಳಿದ್ದನಂತೆ.


ಅನೇಕ ಸನ್ನಿವೇಶದಲ್ಲಿ ಸಂವಹನ ಪ್ರಮುಖ ಪಾತ್ರ ವಹಿಸುತ್ತದೆ. ಒಂದು ವೇಳೆ ಸಂವಹನ ವಿಫಲವಾದರೆ ಸಂಸ್ಥೆಯ ಕೆಲಸಗಳು ನಿಂತು ಹೋಗುತ್ತವೆ. ಸಮಯದ ನಷ್ಟವಾಗುತ್ತದೆ. ಹೆಚ್ಚಿನ ಆರ್ಥಿಕ ಹೊರೆ ಕೂಡ ಉಂಟಾಗಬಹುದು. ಗ್ರಾಹಕರ ನಂಬಿಕೆ ಕ್ಷೀಣಿಸುತ್ತದೆ. ಆಡಳಿತ ಮಂಡಳಿ ಮತ್ತು ನೌಕರರ ಸಮನ್ವಯ ಇಲ್ಲದಂತಾಗುತ್ತದೆ. ಸಂಸ್ಥೆಗೆ ಮತ್ತು ಸದಸ್ಯರಿಗೆ ಆರ್ಥಿಕವಾಗಿ ನಷ್ಟವಾಗುತ್ತದೆ. ನೆನಪಿಡಿ, ಆರ್ಥಿಕ ಅಭಿವೃದ್ಧಿಯಿಲ್ಲದೆ ಪ್ರಪಂಚದಲ್ಲಿ ಯಾವ ಸಾಮಾಜಿಕ ಗುರಿಗಳೂ ಉಪಯೋಗಕ್ಕೆ ಬರುವುದಿಲ್ಲ. Without financial success, all the social goals in the world, don't have a chance.

ದಿನನಿತ್ಯದ ಜೀವನದಲ್ಲಿ, ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ, ಕಾರ್ಯಕ್ಷೇತ್ರದಲ್ಲಿನ ಗೆಲುವಿನಲ್ಲಿ ಸಂವಹನದ ಪಾತ್ರ ಮಹತ್ವದ್ದು. ಸಂವಹನದ ಮಹತ್ವವನ್ನರಿತು ಗೆಲುವನ್ನು ಪಡೆಯುವುದರೆಡೆಗೆ ನಡೆಯುವ ಪ್ರಯತ್ನ ನಮ್ಮದಾಗಲಿ. □

# 2012 - ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷಕ್ಕೊಂದು ವೆಬ್‌ತಾಣ http://2012.coop/



**ರಘುನಂದನ ಕೆ.**
ಸಹಪ್ರಧಾನ ವ್ಯವಸ್ಥಾಪಕ,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.




2012ನ್ನು ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷವನ್ನಾಗಿ ವಿಶ್ವಸಂಸ್ಥೆ ಘೋಷಿಸುವುದರೊಂದಿಗೆ ಸಹಕಾರ ತತ್ವದ ಕುರಿತು ಜಾಗತಿಕ ಮಟ್ಟದಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಸಹಕಾರ ತತ್ವಗಳನ್ನು ಪ್ರಸಕ್ತ ವಾಣಿಜ್ಯ ವಿದ್ಯಮಾನದಲ್ಲಿ ನೆನಪಿಸುವ ಪ್ರಯತ್ನ ಆರಂಭವಾಗಿದೆ. ಸಹಕಾರ ಕ್ಷೇತ್ರ ಸಾಮಾಜಿಕ ಜವಾಬ್ದಾರಿ ಹಾಗೂ ಅಭಿವೃದ್ಧಿಯ ಜೊತೆಗೆ ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಕೂಡ ಕಾರಣವಾಗುತ್ತದೆ ಎನ್ನುವುದನ್ನು ಅಂತಾರಾಷ್ಟ್ರೀಯ ಸಮುದಾಯ ಅರಿತುಕೊಳ್ಳುವ ಅಗತ್ಯವಿದೆ ಎಂದು ವಿಶ್ವ ಸಂಸ್ಥೆಯ ಮಹಾಕಾರ್ಯದರ್ಶಿ ಬಾನ್ ಕೀ ಮೂನ್ ಪ್ರತಿಪಾದಿಸಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಕಂಡುಬಂದ ಆರ್ಥಿಕ ಅಸ್ಥಿರತೆಗೆ ಉತ್ತರ ಸಹಕಾರ ಕ್ಷೇತ್ರದಲ್ಲಿದೆ ಎನ್ನುವುದನ್ನು ಅಂತಾರಾಷ್ಟ್ರೀಯ ಸಮುದಾಯ ಅರಿತುಕೊಳ್ಳುತ್ತಿದೆ.

18 ಡಿಸೆಂಬರ್ 2009ರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 2012 ನ್ನು "ಸಹಕಾರ ಮತ್ತು ಸಾಮಾಜಿಕ ಅಭಿವೃದ್ಧಿ" ವರ್ಷವನ್ನಾಗಿ ಆಚರಿಸುವ ಸಂಕಲ್ಪ ಮಾಡಲಾಗಿತ್ತು. ಈ ಹಿನ್ನಲೆಯಲ್ಲಿ ವಿಶ್ವಸಂಸ್ಥೆಯ ಕೇಂದ್ರ ಕಛೇರಿಯಾದ ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆ ತನ್ನ 66ನೇ ಸಾಮಾನ್ಯ ಸಭೆಯಲ್ಲಿ 31 ಅಕ್ಟೋಬರ್ 2011ರಂದು ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷವನ್ನಾಗಿ 2012ನ್ನು ಅಧಿಕೃತವಾಗಿ ಘೋಶಿಸುವುದರೊಂದಿಗೆ ಸಹಕಾರ ಕ್ಷೇತ್ರದೆಡೆಗೆ ಆರ್ಥಿಕ ಹಾಗೂ ವಾಣಿಜ್ಯ ತಜ್ಞರು ಗಮನಿಸುವಂತಾಯಿತು. ಸಾಮಾಜಿಕ-ಆರ್ಥಿಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು, ಸ್ವಾಯತ್ತ ಸಂಸ್ಥೆಗಳ ರಚನೆಗೆ ಪ್ರೋತ್ಸಾಹಿಸುವುದು ಮತ್ತು ಸಹಕಾರ ಕ್ಷೇತ್ರದ ಅಭಿವೃದ್ಧಿಯೆಡೆಗೆ ಗಮನ ಹರಿಸುವ ಗುರಿಯೊಂದಿಗೆ 2012ರ ಸಹಕಾರ ವರ್ಷಾಚರಣೆ ಆರಂಭವಾಯಿತು.

ICA (International Co-operative Alliance) ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷವನ್ನ ವಿವಿಧ ರೀತಿಯಲ್ಲಿ ವೈಶಿಷ್ಟ್ಯ ಪೂರ್ಣವಾಗಿ ಸಾಮಾಜಿಕ ಬದ್ಧತೆಯೊಂದಿಗೆ ವಾಣಿಜ್ಯ ವ್ಯವಹಾರಗಳನ್ನ ಮಾಡುವ ಬಗ್ಗೆ ಅರಿವುಂಟು ಮಾಡುವ ಉದ್ದೇಶದೊಂದಿಗೆ ಆಚರಿಸಲಾಗುತ್ತಿದೆ.

ಸಹಕಾರವೆಂದರೆ ಮಾನವನ ಅತ್ಯಗತ್ಯ ಅವಶ್ಯಕತೆಗಳನ್ನ ಪೂರೈಸುವುದೇ ಹೊರತು ಐಶಾರಾಮಿ ಆಸೆಗಳ ತಣಿಸುವುದಲ್ಲ ಎಂಬ ನಿಲುವಿನೊಂದಿಗೆ, ಸದಸ್ಯರಾಗಿ ಒಟ್ಟಿಗೆ ಕೈಜೋಡಿಸಿ ಎಲ್ಲರ ಏಳ್ಗೆಗೆ ಶ್ರಮಿಸುತ್ತಿರುವ ಜನರಿಗೆ ಸಮಾನ ಪ್ರತಿಫಲಗಳನ್ನ ಹಂಚುವ ಆ ಮೂಲಕ ಕೆಲವರಿಗೆ ಮಾತ್ರ ಸೀಮಿತವಾಗಿದ್ದ ಆರ್ಥಿಕ ಪ್ರತಿಫಲಗಳ ಹಂಚಿಕೆಯ ಅಸಮಾನತೆಯನ್ನು ಹೊಡೆದೋಡಿಸುವ ಕಾರ್ಯಯೋಜನೆಯನ್ನ ರೂಪಿಸುವ ಚಿಂತನೆಯೊಂದಿಗೆ ಸಹಕಾರಿಗಳ ವರ್ಷಾಚರಣೆಯನ್ನು ಜಾರಿಗೆ ತರಲಾಗಿದೆ.

ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷ 2012ರ ಬಗ್ಗೆ ಮಾಹಿತಿ ಒದಗಿಸುವ ದೃಷ್ಟಿಯಿಂದ ಐಸಿಎ ಪ್ರತ್ಯೇಕ ವೆಬ್‌ತಾಣವೊಂದನ್ನು ನಿರ್ವಹಿಸುತ್ತಿದೆ. ಸಹಕಾರ ವಿಷಯಕ್ಕೆ ಸಂಬಂಧಿಸಿದಂತೆ ಭಾರತದಲ್ಲಿನ ಸಂವಿಧಾನ ತಿದ್ದುಪಡಿ, ದೇಶ/ರಾಜ್ಯದ ಹಲವೆಡೆ ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷದ ಆಚರಣೆ ಹಾಗೂ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ, ಅಂತಾರಾಷ್ಟ್ರೀಯ ಸಹಕಾರ ಕ್ಷೇತ್ರ ಹಾಗೂ ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷ ಆಚರಣೆಗಳ ಬಗ್ಗೆ ಮಾಹಿತಿ ಒದಗಿಸುವ ವೆಬ್‌ತಾಣದ ಪರಿಚಯ ಇಲ್ಲಿದೆ.

ವೆಬ್‌ತಾಣ 05 : http://2012.coop/

- ಈ ವೆಬ್‌ತಾಣದಲ್ಲಿ ICA (International Co-operative Alliance) ಇದರ ರಚನೆ, ಉದ್ದೇಶ, ಉಪವಿಧಿಗಳ ಮಾಹಿತಿ, ಇದರ ಆಡಳಿತ ನಿರ್ವಹಣೆಯ ವಿವರ, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯ ಮಾಹಿತಿಗಳನ್ನು ನೋಡಬಹುದು. ಐಸಿಎ ಇದು ಆಫ್ರಿಕಾ, ಅಮೆರಿಕಾ, ಏಷ್ಯಾ, ಹಾಗೂ ಯೂರೋಪ್ ಖಂಡಗಳಲ್ಲಿ ಹೊಂದಿರುವ ಪ್ರಾದೇಶಿಕ ಕಛೇರಿಯ ವಿವರ ಹಾಗೂ ಕಾರ್ಯಚಟುವಟಿಕೆಗಳನ್ನು ತಿಳಿಯಬಹುದು.
- 2012ನ್ನು ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷವನ್ನಾಗಿ ವಿಶ್ವಸಂಸ್ಥೆ ಘೋಷಿಸಿದ ಹಿನ್ನಲೆ, ಆಚರಣೆಯ ಉದ್ದೇಶ, ಕಾರಣ, ಈ ವರ್ಷಾಚರಣೆಯ ಘೋಷ ವಾಕ್ಯ, ಲಾಂಛನದ ವಿವರಗಳನ್ನು ಈ ತಾಣದಲ್ಲಿ ಅರಿಯಬಹುದು.
- ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷಾಷರಣೆಯನ್ನು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಯಾವ ರೀತಿ ಆಚರಿಸಲಾಗುತ್ತಿದೆ, ಬೇರೆ ಬೇರೆ ದೇಶಗಳ ಸಹಕಾರ ಕ್ಷೇತ್ರದಲ್ಲಿ ಅಲ್ಲಿನ ಜನರ ಭಾಗವಹಿಸುವಿಕೆ, ಸಹಕಾರ ಕ್ಷೇತ್ರ ಉಂಟುಮಾಡಿದ ವಾಣಿಜ್ಯಾತ್ಮಕ ಹಾಗೂ ಆರ್ಥಿಕ ಪರಿಣಾಮಗಳ ವಿವರಗಳನ್ನು ಸಂಕ್ಷಿಪ್ತವಾಗಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಕೆಲ ದೇಶಗಳ ಸಹಕಾರ ಕ್ಷೇತ್ರದ ವೆಬ್ ತಾಣಗಳ ಸಂಪರ್ಕವನ್ನು ಉಪಯೋಗಿಸಿಕೊಳ್ಳಬಹುದಾಗಿದೆ.
- ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷಕ್ಕೆ ಸಂಬಂಧಿಸಿದ ಹಾಗೂ ಐಸಿಎ ಇದರ ಪತ್ರಿಕಾ ಪ್ರಕಟಣೆಗಳು, ಮಾಧ್ಯಮದ ವಿಚಾರಗಳು, ವಿಶ್ವದ ಸಮಾಚಾರಗಳು, ಕಾರ್ಯಕ್ರಮದ ವಿಷಯಪಟ್ಟಿಗಳನ್ನು ಇಲ್ಲಿ ನೋಡಬಹುದಾಗಿದೆ. ವಿಶ್ವದ ಸಹಕಾರ ಕ್ಷೇತ್ರದ ಪ್ರೇರಣೆದಾಯಕ ಕಥನಗಳನ್ನೊಳಗೊಂಡ ಪುಸ್ತಕವೊಂದನ್ನು

20ನೇ ಪುಟಕ್ಕೆ...

# ನಾಯಕನಲ್ಲಿರಬೇಕಾದ ಗುರಿ, ಪಾತ್ರ, ಜವಾಬ್ದಾರಿ ಹಾಗೂ ವಿಚಾರದೃಷ್ಟಿಗಳಲ್ಲಿನ "ಸ್ಪಷ್ಟತೆ" (Clarity)



– ಡಾ.ನಂದೀಶ ಹಿರೇಮಠ
ಆಡಳಿತ ಸಲಹೆಗಾರ ಹಾಗೂ ತರಬೇತಿದಾರ.

ನಾವು ಈ ಹಿಂದಿನ ಎರಡು ಸಂಚಿಕೆಗಳಲ್ಲಿ ಧೀಮಂತ ನಾಯಕನಲ್ಲಿರಬೇಕಾದ 30 ಸಫಲತೆಯ ಸೂತ್ರಗಳ ಪಕ್ಷಿನೋಟವನ್ನು ನೋಡಿದ್ದೇವೆ.

ಈಗ ಮೊದಲು ಪ್ರಸ್ತುತಪಡಿಸಿದ ಸೂತ್ರಗಳ ವಿಷಯಗಳ ಬಗ್ಗೆ ಸ್ವಲ್ಪ ವಿಸ್ತಾರವಾದ ವಿಚಾರಗಳನ್ನು ನಾವೆಲ್ಲ ತಿಳಿದುಕೊಳ್ಳೋಣ ಬನ್ನಿ.

(1) ಗುರಿಗಳ ಸ್ಪಷ್ಟತೆ (Goal Clarity): ನಾಯಕನಾಗಬೇಕೆಂದಿರುವ ವ್ಯಕ್ತಿಯು ತಾನು ಸಾಧಿಸಬೇಕಾದ ಗುರಿಗಳ ಬಗ್ಗೆ ಆಳವಾದ ಅರಿವು, ಸಂಪೂರ್ಣ ಜ್ಞಾನ ಹಾಗೂ ಪರಿಪೂರ್ಣ ಸ್ಪಷ್ಟತೆ ಬಹುಮುಖ್ಯ.

ಈ ಗುರಿಗಳನ್ನು ನಿರ್ಧರಿಸುವಾಗ ನಾವು "SMART" ತತ್ವವನ್ನು ಅಳವಡಿಸಿಕೊಳ್ಳಬೇಕು. ಅರ್ಥಾತ್

S= SPECIFIC (ಗುರಿಗಳಲ್ಲಿ ನಿರ್ದಿಷ್ಟತೆ ಎದ್ದು ಕಾಣಬೇಕು)

M=MEASURABLE (ನಾವು ನಿರ್ಧರಿಸುವ ಗುರಿಗಳನ್ನು ಯಾವುದೇ ಒಂದು ಅಳತೆಗೋಲು/ ಮಾಪಕದಿಂದ ನೋಡಲು ಸಾಧ್ಯವಿರಬೇಕು)

A=ACHIEVABLE (ಆ ಎಲ್ಲಾ ಗುರಿಗಳು ಸಾಧಿಸಲು ಯೋಗ್ಯವಾಗಿರಬೇಕು).

R=REALISTIC (ಗುರಿಗಳು ನಿಜ ಜಗತ್ತಿನ ಜೀವನಕ್ಕೆ ಹತ್ತಿರವಾಗಿರಬೇಕೆ ವಿನಃ, ಕನಸಿನ ಊಹಾಲೋಕದಲ್ಲಿ ಅಲ್ಲ)

T=TIME-BOUND (ಎಲ್ಲ ಗುರಿಗಳನ್ನು ಸಾಧಿಸಲು ಒಂದು ನಿರ್ದಿಷ್ಟವಾದ ಸಮಯದ ಕಟ್ಟಳೆ ಇದ್ದರೆ ಸಾಧಿಸುವುದು ಸುಲಭ)

ಇದೇ "SMART" ತತ್ವವನ್ನು ಇನ್ನೊಂದು ರೀತಿಯಾಗಿ ತಿಳಿದುಕೊಳ್ಳಬಹುದು, ಅಂದರೆ: ಖ=ಖಖಒಕಐಇ (ಸರಳವಾಗಿರಬೇಕು),

2) M=MORAL (ನೀತಿಯಿಂದ ಕೂಡಿರಬೇಕು), A= ACCOUNTABLE (ಬದ್ಧತೆಯಿಂದಿರಬೇಕು), R=RESPONSIVE (ಸ್ಪಂದನಾ ಮನೋಭಾವನೆ ಇರಬೇಕು), T=TRANS PARENT (ಪಾರದರ್ಶಕತೆ ಇದ್ದಾಗ ಸಫಲತೆ ಸಾಧಿಸುವುದು ಸರಳ).

ಈ ಮೇಲೆ ಚರ್ಚಿಸಿದ ಗುಣಗಳು ನಾವು ನಮ್ಮ "ಗುರಿಗಳನ್ನು ನಿರ್ಧರಿಸುವಾಗ" ಇರಬೇಕಾದ್ದು ಬಹುಮುಖ್ಯ. ಅದರೊಂದಿಗೆ ಧನಾತ್ಮಕ ಮನೋಭಾವನೆ (POSITIVE MENTAL ATTITUDE) ಇದ್ದರೆ ಇನ್ನೂ ಒಳ್ಳೆಯದು: ಒಬ್ಬ ಧನಾತ್ಮಕ ಮನೋಭಾವನೆಯಿರುವ ವ್ಯಕ್ತಿಯನ್ನು ಮರುಭೂಮಿಯಲ್ಲಿ ಬಿಟ್ಟರೆ ಅವನು ನೀರಿ(Oasis)ಗಾಗಿ ಹುಡುಕುತ್ತಾನೆ, ತೊಂದರೆಗಳು ಎದುರುಗೊಂಡಾಗ "ಅವಕಾಶ" (OPPORTUNITIES)ಗಳಿಗಾಗಿ ಹುಡುಕುತ್ತಾನೆ "ಕಾರಣ/ ಕುಂಟು ನೆಪಗಳನ್ನು ಅಲ್ಲ. "ಛಲವಿದ್ದವನಿಗೆ ಸೋಲಿಲ್ಲ" ಎಂಬ ಹಿರಿಯರ ಮತ್ತು ಅನುಭವಿಕರ ಮಾತು ಸತ್ಯ.

3) ಪಾತ್ರಗಳು (ROLES) ಮತ್ತು ಜವಾಬ್ದಾರಿಗಳು (RESPONSIBILITIES)

ನಾವು ನಮ್ಮ ಗುರಿಗಳ ಬಗ್ಗೆ "ಸ್ಪಷ್ಟತೆ" ಪಡೆದನಂತರ, ನಾವು ನಿರ್ವಹಿಸಬೇಕಾದ ಪಾತ್ರಗಳ ಬಗ್ಗೆ ತಿಳಿದುಕೊಳ್ಳುವುದು ಬಹು ಅವಶ್ಯ. ಉದಾಹರಣೆಗೆ ಒಂದು ಬ್ಯಾಂಕಿಂಗ್ ಸಂಸ್ಥೆಯಲ್ಲಿನ ಮ್ಯಾನೇಜರ್ (Manager) ವಿವಿಧ ಪಾತ್ರಗಳನ್ನು ವಹಿಸುತ್ತಾನೆ ಮತ್ತು ನಿರ್ವಹಿಸುತ್ತಾನೆ(ಳೆ): ದುಡ್ಡಿನ ಕ್ರೋಢೀಕರಣ (Deposit mobilisation), ಸಾಲ ನೀಡುವಾಗ ಮಾಪಕ ಮಾಡುವ ಕೌಶಲ್ಯ (Credit Appraisal skills) ಗ್ರಾಹಕರೊಂದಿಗೆ ಸಂಬಂಧ ನಿರ್ವಹಣೆ ಸಾಮಾರ್ಥ್ಯ (Customer Relationship Management Skills), ಆಡಳಿತ ಮಂಡಳಿಯ ಜೊತೆಗೂಡಿ ಯೋಜನೆಕಾರನಾಗುವುದು (Being good planner along with board of Directors), ಮನೆಯಲ್ಲಿ ಸಂಸಾರದ ಮುಖ್ಯಸ್ಥನಾಗಿ (Being Head of family at Home) ಹಾಗೂ ಎಲ್ಲ ಸಹೋದ್ಯೋಗಿಗಳಿಗೆ ಸ್ನೇಹಿತನಾಗಿ – ಗುರುವಾಗಿ – ಮಾರ್ಗದರ್ಶಕನಾಗಿ (friend, philosopher and guide for the employees) "ತಕ್ಕ ಕೆಲಸಕ್ಕೆ ತಕ್ಕ ಪಾತ್ರ" ಹೊತ್ತು ಸಮರ್ಥ ನಿರ್ವಹಣೆ ಬಹುಮುಖ್ಯ ಪಾತ್ರವಹಿಸುತ್ತದೆ.

3) ಈ ಎಲ್ಲ ಪಾತ್ರಗಳನ್ನು ನಿರ್ವಹಿಸು ವಾಗ ಹೆಚ್ಚಿನ "ಸ್ಪಷ್ಟತೆ" ಇದ್ದರೆ, ಒಂದು ಪಾತ್ರ ಇನ್ನೊಂದು ಪಾತ್ರದೊಂದಿಗೆ ಹೊಂದಿಕೊಳ್ಳಲು ಬರಬಹುದಾದ ದ್ವಂದ್ವ ಅಥವಾ ಸ್ಪಷ್ಟತೆ ಅಥವಾ ಸಂಘರ್ಷಗಳನ್ನು ಸುಲಭವಗಿ ಕಡಿಮೆಮಾಡಬಹುದು.

ಅದಕ್ಕೂ ಮುಖ್ಯವಾಗಿ ನಾವು ನಿರ್ವಹಿಸಬೇಕಾದ ಪಾತ್ರಗಳ "ಸ್ಪಷ್ಟ ಅರಿವು" ಇದ್ದಾಗ ನಾವು ಹೆಗಲಿಗೇರಿಸಿಕೊಳ್ಳಬೇಕಾದ "ಜವಾಬ್ದಾರಿ" (Responsibility)ಗಳ ಇತಿ–ಮಿತಿಗಳು ಗೊತ್ತಾಗುತ್ತದೆ. ಇದರಿಂದಾಗಿ ಕೈಗೆ ತೆಗೆದುಕೊಂಡ ಪಾತ್ರ ಹಾಗೂ ಜವಾಬ್ದಾರಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿ, ಬೇಕಾದ ಸಫಲತೆಯನ್ನು ತನ್ನಿಂದ ಮತ್ತು ಇತರರಿಂದ ಹೊರಹೊಮ್ಮುವಂತೆ ಮಾಡಲು ಅನುಕೂಲವಾಗುತ್ತದೆ. ಬೆಳೆಯುವ ವಾತಾವರಣ ಕಲ್ಪಿಸಬಹುದು.

ಇಷ್ಟೆಲ್ಲ ಆದಾಗ ಮಾಡು ಕೆಲಸಗಳಲ್ಲಿ "ಸ್ವಂತಿಕೆ ಮನೋ ಭಾವನೆ" (Ownerhsip feeling) ಒಂದು ಧನಾತ್ಮಕ ಪರಿಣಾಮಗಳು (positive results) ತಾನಾಗಿಯೇ ಬರಲು ಪ್ರಾರಂಭವಾಗುತ್ತವೆ.

(3) ವಿಶಾಲ ದೃಷ್ಟಿಕೋನ (Broad Thinking Approach) : ಎಲ್ಲ ಕೆಲಸಗಳ ಸಫಲತೆಗೆ "ವಿಚಾರಗಳು" ತಳಹದಿಯಾಗಿರುತ್ತವೆ ಎಂಬುದನ್ನು ನಾವು ಸಾದಾಕಾಲ ನೆನಪಿನಲ್ಲಿ ಇಟ್ಟುಕೊಂಡಿರಬೇಕು. ಹಿರಿಯ ಅನುಭವಿಗಳು ಈ ರೀತಿ ಹೇಳಿದ್ದಾರೆ: "Things are created TWICE in this world, once in the mental world, then in the physical word" "(ಅರ್ಥಾತ್, ಈ ಜಗತ್ತಿನಲ್ಲಿ ವಸ್ತುಗಳು ಎರಡುಬಾರಿ ಸೃಷ್ಟಿಹೊಂದುತ್ತವೆ, ಒಮ್ಮೆ ಮನಸಿನ ಜಗತ್ತಿನಲ್ಲಿ ತದನಂತರ ಈ ಭೌತಿಕ ಜಗತ್ತಿನಲ್ಲಿ). ಈ ಮಾತು ಎಷ್ಟು ನಿಜವಲ್ಲವೇ? ಈ ವಿಶಾಲ ದೃಷ್ಟಿಕೋನದಿಂದ ಹಾಗೂ ಸ್ಪಷ್ಟತೆಯಿಂದ ವಿಚಾರಿಸುವ, ಚಿಂತನೆ ಮಾಡುವ, ವಿಶ್ಲೇಷಿಸುವ, ಕೂಲಂಕುಶವಾಗಿ ಆಗು–ಹೋಗುಗಳನ್ನು ಅವಲೋಕಿಸಿ ನಿರ್ಧಾರಮಾಡಿ ಕಾರ್ಯರೂಪಕ್ಕೆ ಇಳಿಯುವಾಗ ನಾಯಕನ ಪಾತ್ರ ಬಹು ಮುಖ್ಯ ಪಾತ್ರವಹಿಸುತ್ತದೆ.

(5) ನಿಜವಾದ ಹಾಗೂ ಸಮರ್ಥನಾದ ನಾಯಕನು ಇಂದಿಗಲ್ಲ, ನಾಳೆಗಲ್ಲ ಆದರೆ ಬಹು ದೂರದಲ್ಲಿರುವ ಕಾಣಲಾರದ "ಭವಿಷ್ಯದ"

16ನೇ ಪುಟಕ್ಕೆ...



ಸಹಕಾರ ಕ್ಷೇತ್ರದ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ನಂಬಿಕೆಯಿರಿಸಿರುವ

# ಶ್ರೀ ನಾಗೇಂದ್ರ ಗುಪ್ತ



ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ

ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರತಿನಿಧಿಯಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ನಾಗೇಂದ್ರ ಗುಪ್ತ ರವರು ಗೌರಿಬಿದನೂರ ಅಕ್ಷಯ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡನ ಅಧ್ಯಕ್ಷರು. ವಾಸವಿ ಸೌಹಾರ್ದ ಸಹಕಾರಿಯ ಸ್ಥಾಪಕ ಅಧ್ಯಕ್ಷರು. ಸಹಕಾರ ತತ್ವಗಳಲ್ಲಿ ಅಪಾರ ನಂಬಿಕೆಯುಳ್ಳವರು. ಸಹಕಾರ ಕ್ಷೇತ್ರದ ಮೂಲಕ ಸಮುದಾಯದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂದು ದೃಢವಾಗಿ ನಂಬಿದ್ದಾರೆ. ಹಾಗೆಂತಲೇ ಸಹಕಾರ ಕ್ಷೇತ್ರವನ್ನು ಬಲಯುತವಾಗಿ ಹಾಗೂ ಆರೋಗ್ಯವಾಗಿ ಬೆಳೆಸುವದು ಅಗತ್ಯ ಎಂದು ಪ್ರತಿಪಾದಿಸುತ್ತಾರೆ. ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಕ್ಷೇತ್ರಕ್ಕೆ ಬರುವುದು ಅವಶ್ಯಕ ಎಂದು ಅಭಿಪ್ರಾಯವುಳ್ಳವರು.

ಶ್ರೀಯುತರು ದಿನಾಂಕ 16-1-1966ರಲ್ಲಿ ಜನಿಸಿದವರು. ತಂದೆ ಶ್ರೀರಂಗಯ್ಯಶೆಟ್ಟಿ. ಸುಸಂಸ್ಕೃತ ಕುಟುಂಬ. ವ್ಯಾಪಾರ ಇವರ ಕುಟುಂಬದ ವೃತ್ತಿ. ಪ್ರಾಥಮಿಕ ಶಿಕ್ಷಣವನ್ನು ಚೋಗಳಶೆಟ್ಟಿಯಲ್ಲಿ ಪೂರೈಸಿ ಮಾಧ್ಯಮಿಕ ಶಿಕ್ಷಣವನ್ನು ಗುಡಿಬಂಡೆಯಲ್ಲಿ ಪೂರೈಸಿದ್ದಾರೆ. ನಂತರ ವ್ಯಾಪಾರವನ್ನೆ ವೃತ್ತಿಯನ್ನಾಗಿ ಸ್ವೀಕರಿಸಿದರು.

ವ್ಯಾಪಾರದ ಜೊತೆಗೆ ಸಮುದಾಯದ ಆರೋಗ್ಯದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಕಡೆಗೆ ಗಮನಹರಿಸಿದ್ದಾರೆ. ಆರ್ಯವೈಶ್ಯ ಮಹಾಸಭಾದ ಸದಸ್ಯರಾಗಿ ಶ್ರೀ ಪತಂಜಲಿ ಯೋಗ ತರಬೇತಿಯ ಜ್ಞಾನ ಸಂಪಾದಿಸಿ ತರಬೇತಿ ಶಾಲೆಯ ಶಿಕ್ಷಕರಾಗಿದ್ದಾರೆ. ಅಖಂಡ ಭಾರತ ಸಂಕಲ್ಪವೇದಿಕೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀ ಪತಂಜಲಿ ಯೋಗ ತರಬೇತಿ ವಿಶ್ವಸ್ಥಮಂಡಳಿ ಟ್ರಸ್ಟನ ಖಜಾಂಚಿಯಾಗಿ,ವಿಶ್ವ ಹಿಂದು ಪರಿಷತ ಸದಸ್ಯರಾಗಿ ಪತಂಜಲಿ ಶಿಕ್ಷಣ ಸಮೀತಿಯ ಬೌದ್ಧಿಕ ಪ್ರಮುಖರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀಯುತರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಅಕ್ಷಯ ಕ್ರೆಡಿಟ್ ಕೋ-ಆಪರೇಟಿವ ಸೊಸಾಯಿಟಿಯು ಪ್ರಸಕ್ತ ಸಾಲಿನಲ್ಲಿ 16 ಲಕ್ಷ ರೂಗಳ ಲಾಭವನ್ನು ಗಳಿಸಿದ್ದು ತನ್ನ ಸದಸ್ಯರಿಗೆ 20% ಡಿವಿಡೆಂಡ ನೀಡಿದೆ. ಸಹಕಾರಿಯಲ್ಲಿ 200 ಕಾಯಂ ಸದಸ್ಯರು, 100 ಸಹ ಸದಸ್ಯರು ಹಾಗೂ 1000 ನಾಮಮಾತ್ರ ಸದಸ್ಯರಿದ್ದಾರೆ.

21.00 ಲಕ್ಷ ರೂಗಳ ಪಾಲು ಬಂಡವಾಳ, 4.5 ಕೋಟಿ ರೂಗಳ ಠೇವಣಿ, 4.00 ಕೋಟಿ ರೂಗಳ ಸಾಲ 1.00 ಕೋಟಿರೂಗಳ ಹೂಡಿಕೆ ಯಿದ್ದು ಸಾಲದಲ್ಲಿ ಶೇಕಡಾ ನೂರಕ್ಕೆ ನೂರು ವಸೂಲಿಯಿದೆ ಕಡಿಮೆ ಬಡ್ಡಿಯಲ್ಲಿ ದಿನವಹಿ ಸಾಲ ವ್ಯಾಪಾರಾಭಿವೃದ್ಧಿ ಸಾಲ ಚೀಟಿ ವ್ಯವಹಾರ ಮುಂತಾದವುಗಳು ಈ ಸಹಕಾರಿಯ ವಿಶೇಷ ಆಕರ್ಷಣೆಯಾಗಿವೆ.

ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯನ್ನು ಹೊಂದಿರುವ ಈ ಸಹಕಾರಿಯ ಆಡಳಿತ ಮಂಡಳಿಯಲ್ಲಿ ವಾಣಿಜ್ಯ ಬ್ಯಾಂಕುಗಳ ನಿವೃತ್ತ ಅಧಿಕಾರಿಗಳಿರುವದು ಸಹಕಾರಿಯ ಹಣ ಕಾಸಿನ ನಿರ್ವಹಣೆಗೆ ಪೂರಕವಾಗಿದೆ. ಅನುಭಾವಿ ಆಡಳಿತ ಆಡಳಿತ ಮಂಡಳಿ ಹಾಗೂ ದಕ್ಷ ಸಿಬ್ಬಂದಿವರ್ಗ ಕ್ರೀಯಾಶೀಲ ಸದಸ್ಯರು ಈ ಸಹಕಾರಿಯ ಪ್ರಗತಿಗೆ ಕಾರಣರಾಗಿದ್ದಾರೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸದಸ್ಯರಲ್ಲಿ ಹಾಗೂ ಸಾರ್ವಜನಿಕರಲ್ಲಿ ಉತ್ತಮ ಅಭಿಪ್ರಾಯ ವ್ಯಕ್ತವಾಗುತ್ತಿದೆ.ವಿಶ್ವಾಸ ಹೆಚ್ಚುತ್ತಿದೆ.ಈ ವಿಶ್ವಾಸವನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಅಭಿಪ್ರಾಯ ಪಡುತ್ತಾರೆ.

ಮುಂದಿನ ದಿನಗಳಲ್ಲಿ ಮಂಚೇನಹಳ್ಳಿಯಲ್ಲಿ ಶಾಖೆಯನ್ನು ತೆರೆಯುವ ಹಾಗೂ ಬಿರ್ಲಾ ಇನ್ಸುರೆನ್ಸ ಜೊತೆಗೆ ಒಪ್ಪಂದ ಮಾಡಿಕೊಳ್ಳುವ ಯೋಜನೆಯಿದ್ದು ಕಾರ್ಯವ್ಯಾಪ್ತಿಯ ಎಲ್ಲ ಸದಸ್ಯರಿಗೆ ಸೌಲಭ್ಯಗಳನ್ನು ತ್ವರಿತ ಗತಿಯಲ್ಲಿ ಒದಗಿಸುವ ಉದ್ದೇಶ ಹೊಂದಲಾಗಿದೆ ಮತ್ತು ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಕಾರ್ಯಯೋಜನೆ ಹಾಕಿಕೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.

## ನಾಯಕನಲ್ಲಿರಬೇಕಾದ ಗುರಿ, ಪಾತ್ರ, ಜವಾಬ್ದಾರಿ ಹಾಗೂ ವಿಚಾರದೃಷ್ಟಿಗಳಲ್ಲಿನ "ಸ್ಪಷ್ಟತೆ" (Clarity)

...15ನೇ ಪುಟದಿಂದ

ಬಗ್ಗೆ ವಿಶ್ಲೇಷಿಸಿ - ವಿಮರ್ಷಿಸಿ- ವಿಚಾರಿಸಿ ಪ್ರತಿ "ವ್ಯಕ್ತಿಗೂ" ಹಾಗೂ "ಸಂಸ್ಥೆಗೂ" ಬಲಿಷ್ಠವಾದ - ಭದ್ರವಾದ ತಳಹದಿಯನ್ನು ಹಾಕುತ್ತಾನೆ.

ಅದನ್ನೆ ನಾವು ಈಗಿನ "ನಿರ್ವಹಣೆಯ ಭಾಷೆಯಲ್ಲಿ" (Management Languageನಲ್ಲಿ) VISION, MISSION, CORPORATE GOALS, QUALITY POLICY, CORE VALUES ಮುಂತಾದ ವ್ಯಾಖ್ಯಾನಗಳಲ್ಲಿ ಪ್ರಸ್ತಾಪಿಸುತ್ತೇವೆ, ವಿಚಾರಿಸುತ್ತೇವೆ, ವಿಮರ್ಶಿಸುತ್ತೇವೆ ಮತ್ತು ನಿಜ ಜೀವನದಲ್ಲಿ ಅಳವಡಿಸಲು ಸತತ ಪ್ರಯತ್ನ ಮಾಡುತ್ತೇವೆ. ಅದಕ್ಕಾಗಿಯೇ ಅನುಭವವಿರುವ ನಾಯಕನಾದ ಏನು(ಳು) ಮಾಡುವ ವಿಚಾರ (Thoughts), ಮಾತು (Words), ಕೃತಿ (Deeds)ಗಳಲ್ಲಿ "ವಿಶಾಲತೆ" (Broad approach) ಮತ್ತು ಪರಿಪಕ್ವತೆ (Maturity)ಯನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ.

ಒಬ್ಬ ಧೀಮಂತ ನಾಯಕನಾದವನು, ಎಲ್ಲ ವಿಚಾರಗಳ - ವ್ಯಕ್ತಿಗಳ - ಕೆಲಸಗಳ- ಸಂಸ್ಥೆಗಳ- ಪರಿಣಾಮಗಳ ಬಗ್ಗೆ ಎಂದಿಗೂ ಸಂಕುಚಿತ ದೃಷ್ಟಿಕೋನದಿಂದ ನೋಡದೆ "ವಿಶಾಲ ದೃಷ್ಟಿಕೋನ"ದಿಂದ ನೋಡುತ್ತಾನೆ ಹಾಗೂ ಮಾಡುತ್ತಾನೆ. ಅದರಿಂದ "ವ್ಯಕ್ತಿ"ಯೊಬ್ಬನು "ಶಕ್ತಿ"ಯಾಗಿ ಮುನ್ನಡೆಯಲು ಸರಳವಾಗುತ್ತದೆ.

ಹಾಗಾದರೆ, ನಾವು-ನೀವೆಲ್ಲ ಸಾಧಿಸಬೇಕಾದ ಗುರಿಗಳನ್ನು ನಿರ್ವಹಿಸಬೇಕಾದ ಪಾತ್ರ-ಜವಾಬ್ದಾರಿಗಳು ಇಂದೇ, ಈಗಲೇ ಬರೆದು ಕೊಂಡು ಕಾರ್ಯಪ್ರವೃತ್ತರಾಗೋಣವೇ? ನೆನಪಿಡಿ: "ಈ ಸ್ಪಷ್ಟತೆಯಲ್ಲಿ ಅಡಗಿದೆ ಪ್ರತಿಯೊಂದು ವ್ಯಕ್ತಿ- ಸಂಸ್ಥೆಗಳು ಶ್ರೇಷ್ಠತೆ" ■

ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿರುವ ಸಹಕಾರಿ

# ಆರ್. ದಿನೇಶ್ ಗುಪ್ತ



ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಹಾಲಿ ಅಧ್ಯಕ್ಷರಾಗಿರುವ ಶ್ರೀ ಆರ್.ದಿನೇಶ್ ಗುಪ್ತರವರು ಸಂಯುಕ್ತ ಸಹಕಾರಿಯ ಉತ್ಸಾಹಿ ಯುವ ನಿರ್ದೇಶಕರು. ಈ ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರವು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ ಎಂಬುದನ್ನು ಮನಗಂಡು ಸಹಕಾರ ತತ್ವಗಳಲ್ಲಿ ವಿಶ್ವಾಸವಿಟ್ಟು ಸಹಕಾರ ಕ್ಷೇತ್ರಕ್ಕೆ ಬಂದ ಯುವಕರಲ್ಲಿ ಒಬ್ಬರು.

ಕುಟುಂಬದ ವೃತ್ತಿ, ವ್ಯಾಪಾರ, ತಂದೆ ರಾಮಶೆಟ್ಟಿ ತಾಯಿ ವಿಜಯಲಕ್ಷ್ಮಿ. 24.04.1967 ರಲ್ಲಿ ಕೊಳ್ಳೇಗಾಲದಲ್ಲಿ ಜನನ ಬಿ.ಎಸ್ಸಿ. ವರೆಗೆ ಶಿಕ್ಷಣ ನಂತರ ಕುಟುಂಬದ ವೃತ್ತಿ–ವ್ಯಾಪಾರವನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಜೊತೆಗೆ ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸುವ ಅಪೇಕ್ಷೆಯುಳ್ಳವರಾಗಿ ರೋಟರಿ ಕ್ಲಬ್‌ನ ಹಾಲಿ ಅಧ್ಯಕ್ಷರಾಗಿ ಆಯ್ಕೆ. ನಂತರ ವಾಸವಿ ಕ್ಲಬ್ ಕೊಳ್ಳೇಗಾಲ ಝೂನಲ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಪೂರ್ಣಪ್ರಜ್ಞ ವಿದ್ಯಾಲಯದ ಮುಖ್ಯಪ್ರವರ್ತಕರಾಗಿ ಹಾಲಿ ನಿರ್ದೇಶಕರಾಗಿ ಶಿಕ್ಷಣ ಕ್ಷೇತ್ರದಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ ಭಾರತ ವಿಕಾಸ ಪರಿಷತ್ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ಆರ್ಯವೈಶ್ಯ ಸಹಕಾರ ಬ್ಯಾಂಕ್ ಹಾಗೂ ಸಂಸ್ಥೆಗಳ ರಾಜ್ಯ ಮಟ್ಟದ ಒಕ್ಕೂಟದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಹವ್ಯಾಸವನ್ನು ಇರಿಸಿ ಕೊಂಡಿರುವ ಶ್ರೀಯುತರು ಸೇನೆಯ ಅನೇಕ ಕಾರ್ಯಕ್ರಮಗಳಲ್ಲಿ ಮುಂದಾಳತ್ವವನ್ನುವಹಿಸಿದ್ದಾರೆ. ರಕ್ತದಾನ ಶಿಬಿರಗಳನ್ನು ಏರ್ಪಡು ಮಾಡುವ ಪ್ರವೃತ್ತಿಯನ್ನು ರೂಢಿಸಿಕೊಂಡಿದ್ದಾರೆ. ಧಾರ್ಮಿಕ ಉತ್ಸವಗಳಲ್ಲಿ ಸಕ್ರಿಯವಾದ ಪಾತ್ರವನ್ನು ನಿರ್ವಹಿಸುವ ಸ್ವಭಾವದವರಾಗಿದ್ದಾರೆ.

ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಕೊಳ್ಳೆಗಾಲ ಇದರ ಪ್ರವೃತ್ತಕರಾಗಿ ಹಾಲಿ ಅಧ್ಯಕ್ಷರಾಗಿ ಶ್ರೀಯುತರು ಸಹಕಾರಿಕ್ಷೇತ್ರದ ಮೂಲಕ ಸಾರ್ವಜನಿಕರ ಸೇವೆಗೆ ಬಹಳಷ್ಟು ಅವಕಾಶಗಳಿವೆ ಈ ಅವಕಾಶಗಳನ್ನು ಉಪಯೋಗಿಸಿ ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸುವುದೇ ನನ್ನ ಮೂಲ ಉದ್ದೇಶವೆಂಬುದು ಇದರ ಅಭಿಪ್ರಾಯವಾಗಿದೆ.

ರಾಜ್ಯಮಟ್ಟದಲ್ಲಿ ಸಮಾಜದ ಅಭಿವೃದ್ಧಿಗಾಗಿ ಆರ್ಯವೈಶ್ಯ ಸಮಾಜದ ಅಭಿವೃದ್ಧಿಗಾಗಿ ಹಲವಾರು ಉತ್ತಮ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಹಾಗೂ ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಒಂದು ಕ್ರಿಯಾಯೋಜನೆಯನ್ನು ರಚನೆ ಮಾಡಿಜಾರಿಮಾಡುವ ಉದ್ದೇಶ ಹೊಂದಿದ್ದಾರೆ.

## ಸ್ವಾಭಿಮಾನಿ ಸಹಕಾರಿಯ ಬಗ್ಗೆ ಅನಿಸಿಕೆ



- ಸೌಹಾರ್ದ ಸಹಕಾರಿಯಿಂದ ಮೂಡಿಬರುತ್ತಿರುವ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯು ಸಹಕಾರಿ ರಂಗದಲ್ಲಿಯೇ ಒಂದು ವಿಭಿನ್ನವನ್ನು ಸಮಗ್ರ ಮತ್ತು ಸಂಪೂರ್ಣವಾಗಿ ಜನತೆಗೆ ತಿಳಿಸುವ ಸ್ವಾಭಿಮಾನಿ ಸಹಕಾರಿಯು ಒಂದು ಅಸ್ತ್ರವಾಗಿದೆ. "ಮನುಷ್ಯನಿಗೆ ಗಾಳಿ, ಮರಕ್ಕೆ ನೀರು, ಮಗುವಿಗೆ ಪೋಷಕರು ಹಾಗೇಯೇಸಹಕಾರಿಗೆ ಸ್ವಾಭಿಮಾನಿ ಮಾಸಪತ್ರಕರ ಅತಿ ಮುಖ್ಯ ಎಂದು ನಮ್ಮ ಅಭಿಪ್ರಾಯ ಈಗಾಗಲೇ ಸ್ವಾಭಿಮಾನಿ ಸಹಕಾರಿಯು ಚೆನ್ನಾಗಿ ಮೂಡಿ ಬರುತ್ತಾ ಇದೆ. ಹಾಗೇಯೇ ಚನ್ನಾಗಿ ಮೂಡಿಬರಲಿ

  **ಮ್ಯಾನೇಜರ್, ಭಾಗ್ಯಲಕ್ಷ್ಮಿ ವಿವಿಧೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ.**

- ತನ್ನ ಮಕ್ಕಳ ಬಗ್ಗೆ ತನಗೆ ಅವಗಾಹನೆ ಇರುವವನೇ ಸರಿಯಾದ ತಂದೆ. ಹಾಗೇಯೇ ಕರ್ನಾಟಕ ರಾಜ್ಯದ ಸೌಹಾರ್ದ ಸಹಕರಿಗಳ ಬಗ್ಗೆ ಶಿಕ್ಷಣ ಪ್ರಚಾರವನ್ನು ಕೈಗೊಂಡು ಅವುಗಳ ಗುಣಮಟ್ಟ ನಿರ್ವಹಣೆ ಹಾಗೂ ಉತ್ತಮ ತರಬೇತಿಯನ್ನು ನೀಡುತ್ತಿರುವುದು ಸ್ವಾಭಿಮಾನಿ ಸಹಕಾರಿಯಿಂದ ತಿಳಿದುಬರುತ್ತಿದೆ. ನಿಜವಾಗಿಯೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಹಕಾರ ರಂಗದಲ್ಲಿ ಒಂದು ಮಹತ್ತರ ಹೆಜ್ಜೆಯನ್ನು ಇಡುತ್ತಿದೆ ಎಂಬುದು ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯು ಕನ್ನಡಿಯ ಪ್ರತಿಬಿಂಬವಾಗಿದೆ. ಸೌಹಾರ್ದ ಸಹಕಾರಿಗಳಿಗೆ ಸ್ವಾಭಿಮಾನಿಸಹಕಾರಿ ಮಾಸ ಪತ್ರಿಕೆಯಿಂದ ಮಹತ್ತರವಾದ ತರಬೇತಿ ಸಿಗುತ್ತಿದೆ. ಎಂದರೆ ತಪ್ಪಿಲ್ಲ.

  **ಬಸವನಗೌಡ, ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಸ್ಥೆ, ಹೊಸೂರು.**

- ಸಂಯುಕ್ತ ಸಹಕಾರಿ ಪ್ರಕಟಣೆಗಳು ತುಂಬಾ ಉಪಯುಕ್ತ ವಾಗಿವೆ. ಅದರಲ್ಲೂ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯು ಬಹಳ ಉಪಯುಕ್ತವಾಗಿದೆ. ಇದರಲ್ಲಿ ಮೂಡಿಬರುವ ಲೇಖನಗಳು 12ನೇ ಶತಮಾನದ ಬಸವಣ್ಣನವರ ವಚನಗಳ ಅನುಸಾರದ ಆಧುನಿಕ ಶೈಲಿಯ ಲೇಖನ ರೂಪದಲ್ಲಿ ಮೂಡಿಬರುತ್ತಿವೆ ಎಂಬುದು ಎರಡು ಮಾತ್ತಿಲ್ಲ. ಸಹಕಾರದ ಬಗ್ಗೆ ಮಾಹಿತಿ ಬೇಕಾದಲ್ಲಿ ನಾವು ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಕೆಯನ್ನು ಓದಿದರೆ ಸಾಕಷ್ಟೆ ಎಂಬುದು ನನ್ನ ಅನಿಸಿಕೆಯಾಗಿದೆ.

  **ಶ್ರೀಮತಿ ಅನಿತ ಮುಖ್ಯೋಪಾಧ್ಯಾಯಿನಿ, ಶಿರಾಳಕೊಪ್ಪ.**

# ವಿದೇಶಿ ಬಂಡವಾಳ - ಹಾವಿನ ಹೆಡೆಯೊಳಗಿನ ಹಣ



**ಎಚ್. ಶಿವಕುಮಾರ್**
ಚಾರ್ಟೆರ್ಡ್ ಅಕೌಂಟೆಂಟ್

ವಿದೇಶಿ ನಾಗರೀಕರು ಅಥವಾ ವಿದೇಶಿ ಸಂಸ್ಥೆಗಳು ನಮ್ಮ ದೇಶದಲ್ಲಿ ನೊಂದಾವಣಿಯಾಗಿರುವ ವ್ಯಾಪಾರಿ ಸಂಸ್ಥೆಗಳ ಬಂಡವಾಳದಲ್ಲಿ ಹಣ ಹೂಡುವುದು ಮತ್ತು ಆ ಮೂಲಕ ನಮ್ಮ ದೇಶದ ವ್ಯಾಪಾರಿ ಸಂಸ್ಥೆಗಳ ಸಂಪೂರ್ಣ ಅಥವಾ ಭಾಗಷಃ ಮಾಲೀಕತ್ವವನ್ನು ಹೊಂದುವ ಪ್ರಕ್ರಿಯೆಯನ್ನು ವಿದೇಶಿ ನೇರ ಬಂಡವಾಳ (ಎಫ್.ಡಿ.ಐ) ಎಂದು ಕರೆಯಲಾಗುತ್ತದೆ. ವಿದೇಶಿ ನೇರ ಬಂಡವಾಳ ಹಣದ ಒಳ ಮತ್ತು ಹೊರ ಹರಿವನ್ನು ವಿದೇಶಿ ಹೂಡಿಕೆ ಉತ್ತೇಜನ ಮಂಡಳಿ ಎಂಬ ಕೇಂದ್ರ ಸರ್ಕಾರದ ಅಧೀನ ಸಮಿತಿಯೊಂದು ವಿದೇಶಿ ನೇರ ಬಂಡವಾಳದ ಆಗುಹೋಗುಗಳನ್ನು ನಿರ್ದೇಶಿಸುತ್ತದೆ.

10 ಏಪ್ರಿಲ್ 2012 ರಿಂದ ಜಾರಿಯಲ್ಲಿರುವ ಪರೀಷ್ಕೃತ ಗೊಂಡ ಸಮಗ್ರ ವಿದೇಶಿ ನೇರ ಬಂಡವಾಳ ನೀತಿಯಲ್ಲಿ ಹೇಳಿರುವ ಪ್ರಕಾರ ಗೊಂಡ "ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸುವ ಸಲುವಾಗಿ ಸ್ವದೇಶಿ ಬಂಡವಾಳ, ತಾಂತ್ರಿಕತೆ, ಸಾಮರ್ಥ್ಯ ಸಂವರ್ಧನೆಗೆ ಪೂರಕವಾಗಿ ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸುವ ಮತ್ತು ಉತ್ತೇಜಿಸುವ ಉದ್ದೇಶ ಮತ್ತು ಆಶಯ ಭಾರತ ಸರ್ಕಾರಕ್ಕೆ ಇದೆ.




ಪಾಕಿಸ್ತಾನವನ್ನು ಹೊರತು ಪಡಿಸಿ ಯಾವುದೇ ಇನ್ನಿತರ ದೇಶದ ಸಂಸ್ಥೆಗಳು ಅಥವಾ ನಾಗರೀಕರು ಭಾರತದಲ್ಲಿ ಹಣ ಹೂಡಬಹುದು. ನಮ್ಮ ದೇಶದ ಆಂತರಿಕ ಸುರಕ್ಷತೆ ಮತ್ತು ಸಾರ್ವಭೌಮತ್ವವನ್ನು ಗಮನದಲಿರಿಸಿಕೊಂಡು ಬ್ಯಾಂಕಿಗ್, ವಿಮಾನಯಾನ, ತೈಲ, ವಸತಿ, ಭೂ ವ್ಯಾಪಾರ, ಮೂಲ ಸೌಕರ್ಯ, ಅಣುಶಕ್ತಿ, ರಕ್ಷಣೆ, ಕೃಷಿ ಮುದ್ರಣ ಮಾಧ್ಯಮ, ಪ್ರಾಸಾರ, ಅಂಚೆ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳವನ್ನು ತೀವ್ರಾಗಿ ಹತೋಟಿಯಲ್ಲಿಡಲಾಗಿದೆ. ನಮ್ಮ ದೇಶದ ಸಾಂಸ್ಕೃತಿಕ ಹಿನ್ನೆಲೆ, ಪರಂಪರೆ ಮತ್ತು ಜೀವನ ಶೈಲಿಯಲ್ಲಿ ಗಮನದಲ್ಲಿಟ್ಟುಕೊಂಡು ಲಾಟರಿ, ಜೂಜು, ಚಿಟ್ ವ್ಯವಹಾರ, ತಂಬಾಕು, ಸಿಗರೇಟು, ಗೃಹ ನಿರ್ಮಾಣ, ರೈಲು ಸೇವಾ ಕ್ಷೇತ್ರಗಳಲ್ಲಿ ವಿದೇಶಿ.

ನೇರ ಬಂಡವಾಳವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇಲ್ಲಿಯವರೆಗೆ ಚಿಲ್ಲರೆ ಮಾರಾಟದಲ್ಲಿ ಕೂಡ ವಿದೇಶಿ ಬಂಡವಾಳಕ್ಕೆ ಸಂಪೂರ್ಣ ನಿಷೇಧವಿತ್ತು. ಇತ್ತೀಚೆಗೆ ನಡೆದ ಬೆಳವಣಿಗೆಯಲ್ಲಿ ಚಿಲ್ಲರೆ ವ್ಯಾಪಾರಕ್ಕೆ ನೀಡಿದ್ದ ಷರತ್ತು ಬದ್ಧ ವಿದೇಶಿ ನೇರ ಬಂಡವಾಳ ಪರವಾನಿಗೆಗೆ ತೀವ್ರವಾದ ಪರ ಮತ್ತು ವಿರೋಧ ನಿಲುವುಗಳು ವ್ಯಕ್ತವಾಗಿದೆ.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ಉತ್ತೇಜಿಸುವುದರಿಂದ ಸ್ಥಳೀಯ ಸಣ್ಣ ಚಿಲ್ಲರೆ ಮಾರಾಟಗಾರ ವ್ಯಾಪಾರದ ಅಸ್ಥಿತ್ವಕ್ಕೆ ದಕ್ಕೆಯಾಗುತ್ತದೆ ಎಂದು ವಿರೋಧಿ ಅಭಿಪ್ರಾಯ ಮೂಡಿಬಂದಿದೆ.

ವಿದೇಶಿ ನೇರ ಬಂಡವಾಳದ ಪ್ರಬಲ ಪ್ರವಾಹದ ಎದುರು ಸಣ್ಣ ಮೊತ್ತದ ಬಂಡವಾಳವನ್ನು ತೊಡಗಿಸಿ ವ್ಯವಹರಿಸುವ ಸಣ್ಣ ಚಿಲ್ಲರೆ ವ್ಯಾಪಾರಸ್ಥರು ಧೂಳಿಪಟವಾಗಿ ಹೋಗುತ್ತಾರೆ ಎಂಬ ಆತಂಕ ವ್ಯಕ್ತವಾಗಿದೆ. ಕೇಂದ್ರ ಸರ್ಕಾರದ ಈ ಕ್ರಮವನ್ನು ಖಂಡಿಸಿ ಹಲವು ರಾಜ್ಯಗಳ ಸರ್ಕಾರಗಳು ಪ್ರತಿಭಟಿಸಿವೆ.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳವನ್ನು ಉತ್ತೇಜಿಸುವುದರಿಂದ ಯಾವುದೇ ರೀತಿಯ ಪ್ರತಿಕೂಲ ವಾತಾವರಣ ಸೃಷ್ಠಿಯಾಗುವುದಿಲ್ಲ ಎಂಬ ವಿಭಿನ್ನ ಚಿಂತನೆಗಳು ಕೂಡ ನಡೆಯುತ್ತಿವೆ. ವಿದೇಶಿ ಬಂಡವಾಳದ ವ್ಯಾಪಾರಿ ಸಂಸ್ಥೆಗಳು ತಮ್ಮ ಅಗಾಧ ಹಣಬಲದಿಂದ ಮಧ್ಯವರ್ತಿಗಳನ್ನು ಅವಲಂಬಿಸದೆ ನೇರವಾಗಿ ಕೃಷಿಕರನ್ನು ಸಂಪರ್ಕಿಸಿ ವ್ಯವಹಾರ ನಡೆಸುವುದರಿಂದ ನಮ್ಮ ದೇಶದ ಕೃಷಿಕರು ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕುವಂತಾಗುತ್ತದೆ. ಎಂಬ ವಾದವೂ ಇದೆ. ನವನವೀನ ತಾಂತ್ರಿಕತೆ ಮತ್ತು ಸಂಪರ್ಕ ಸಾಧನಗಳ ಬಳಕೆಯಿಂದ ವಿದೇಶಿ ಬಂಡವಾಳ ವ್ಯಾಪಾರಿ ಸಂಸ್ಥೆಗಳು ಎಲ್ಲ ಬಗೆಯ ಉತ್ಪನ್ನಗಳ ತಯಾರಕರನ್ನು ನೇರವಾಗಿ ಸಂಪರ್ಕಿಸಿ ಸಗಟು ಖರೀದಿ ಮಾಡುವುದರಿಂದ ದೈನಂದಿನ ಬಳಕೆ ಸಾಮಗ್ರಿಗಳ ಬೆಲೆಯಲ್ಲಿ ಸ್ಪರ್ಧಾತ್ಮಕ ಇಳಿಕೆಯಾಗಿ ಇದರಿಂದ ಅಂತಿಮವಾಗಿ ಗ್ರಾಹಕರಿಗೆ ಸಾಧ್ಯವಿಲ್ಲದಷ್ಟು ಕಡಿಮೆ ಬೆಲೆಯಲ್ಲಿ ಗೃಹೋಪಯೋಗಿ ವಸ್ತುಗಳು ಲಭ್ಯವಾಗುತ್ತವೆ ಎಂದು ಆರ್ಥಿಕ ಸಮೀಕ್ಷೆಯೊಂದು ತಿಳಿಸುತ್ತದೆ.

ಈ ಎಲ್ಲಾ ಪರ-ವಿರೋಧಿ ನಿಲುವುಗಳ ನಡುವೆಯೂ ವಿದೇಶಿ ನೇರ ಬಂಡವಾಳದ ಬಗ್ಗೆ ಬಹಳ ಜಾಗರೂಕತೆಯಿಂದ ನಿರ್ಧಾರ ತೆಗೆದುಕೊಳ್ಳಬೇಕಾದ ಅಗತ್ಯವಿದೆ. ವಿದೇಶಿ ನೇರ ಬಂಡವಾಳ ಹೂಡುವ ಮಂದಿ ತಮಗೆ ಬೇಕಾದಾಗ ಭಾರತದಲ್ಲಿ ಹಣ ಹೂಡಿ ಸಾಕು ಎನಿಸಿದಾಗ ಹಣವನ್ನು ಎತ್ತಿಕೊಂಡು ಹೋಗುವ ಪರಿಪಾಠದವರು. ಹೀಗೆ ಒಳಬರುವ ಮತ್ತು ಹೊರಹೋಗುವ ಸ್ವೇಚ್ಛಾಚಾರಿಯಿಂದಾಗಿಯೇ ನಮ್ಮ ದೇಶದ ಷೇರು ಮಾರುಕಟ್ಟೆ ಅನಿರೀಕ್ಷಿತ ಏರಿಳಿತಗಳನ್ನು ಕಾಣುತ್ತದೆ. ಹಿಂದೊಮ್ಮೆ ಈಸ್ಟ್ ಇಂಡಿಯಾ ಕಂಪನಿಯೆಂಬ ಹೆಸರಿನಲ್ಲಿ ಭಾರತಕ್ಕೆ ಬರಿ ವ್ಯಾಪಾರದ ಉದ್ದೇಶದಿಂದ ಬಂದ ಕಂಪನಿಯೊಂದು ಹೇಗೆ ಇಡೀ ವ್ಯವಸ್ಥೆಯನ್ನೇ ತನ್ನ ಕೈಯೊಳಗೆ ತೆಗೆದುಕೊಂಡು ಶತಮಾನಗಳ ಕಾಲ ನಮ್ಮನ್ನಳಿದ ಇತಿಹಾಸವೇ ಕಣ್ಣೆದುರು ಇರುವಾಗ ವಿದೇಶಿ ನೇರ ಬಂಡವಾಳದ ಅಗತ್ಯ ಮತ್ತು ಅಪಾಯಗಳೆಡರ ಬಗ್ಗೆ ಅರಿವು ಇರಬೇಕಾಗುತ್ತದೆ. ಪುರಂದರದಾಸರು ಒಂದೆಡೆ ಹೇಳಿದ್ದಾರೆ. "ಹಾವಿನ ಹೆಡೆಯೊಳಗೆ ಹಣವಿದ್ದರೇನು?" ವಿದೇಶಿ ಬಂಡವಾಳದ ಆಕರ್ಷಣೆಯೊಳಗೆ ಹಣವಿದ್ದರೇನು? ವಿದೇಶಿ ಬಂಡವಾಳದ ಆಕರ್ಷಣೆಯಿಂದ ವಿವೇಚನೆಯಲ್ಲಿದೆ ಹಾವಿನ ಹೆಡೆಯೊಳಗೆ ಹಣಕ್ಕೆ ಕೈ ಹಾಕುವುದು ಎಷ್ಟು ಅಪಾಯಕಾರಿಯೋ ಹಾಗೆಯೇ ಹಾವನ್ನು ದಿಗ್ಮೂಢಗೊಳಿಸಿ ಅಗತ್ಯವಿರುವಷ್ಟು ಹಣವನ್ನು ಮಾತ್ರ ಕೈಗೆತ್ತಿಕೊಳ್ಳುವುದು ವಿವೇಕ. ಅಂತಹ ವಿವೇಕವನ್ನು ಮತ್ತು ವೈಚಾರಿಕತೆಯನ್ನು ಆಳುವ ಸರ್ಕಾರಗಳು ಅಳವಡಿಸಿಕೊಳ್ಳಬೇಕು. ■

# "ವಿಶ್ವಾಸರ್ಹತೆ ಶ್ರೀ ರಕ್ಷೆ ಸಹಕಾರ ಕ್ಷೇತ್ರದ ಅವಶ್ಯಕತೆ" – ಸಂತೋಷ್‌ಜಿ

...10ನೇ ಪುಟದಿಂದ

ಅವರೇನು ಇಲ್ಲ ನಮ್‌ನಮ್ ವಿಶ್ವಾಸದಲ್ಲಿ ಬ್ಯಾಂಕ್ ನಡಕೊತಾ ಬರ್ತಾ ಇದೆ ಅಂತ, ಆಮೇಲ್ ಯೋಚ್‌ನೆ ಮಾಡ್ದೆ ಗೌರ್ಮೆಂಟ್ ಗ್ಯಾರಂಟಿ ಇಲ್ದೆ ಇದ್ದಿದ್ದೆ ಒಳ್ಳೇದು ಅಂತ, ಯಾಕೇಂದ್ರೆ ಗೌರ್ಮೆಂಟ್ ಗ್ಯಾರಂಟಿ ಹಾಕಿದ್ದೆಲ್ಲ ಹಳ್ಳ ಹಿಡಿಯುತ್ತೆ, ಹಾಗಾಗಿ ನಮ್ಮ ಸ್ವಂತ ಕಾಲ ಬಲದಮೇಲೆ ಈ ಸೊಸೈಟಿಯನ್ನ ನಿಡೆಸಿಕೊಡು, ಬೆಳೆಸಿಕೊಂಡು ಬಂದಿದೆವೆ. ಕೇವಲ ಕ್ರೆಡಿಬಲಿಟಿ ಒಂದೆ ಆಧಾರ. ಒಂದು ಕೊ–ಆಪರೇಟೀವ್ ಸೊಸೈಟಿಗೆ ನಾನ್ ಷೇರ್ ಹಾಕ್ತೀನಿ ಅಂದ್ರೆ ಯಾಕ್ ಹಾಕ್ತೀನಿ ಅಂತ ಕೇಳುದ್ರೆ ಮೊದಲನೆ ದಿನ ಯಾರ್‍ದ್ದೊ ಮುಖ ನೋಡ್ಕೊಂಡು ಹಾಕ್ತೀವಿ, ಮುಖ ನೋಡೋದು ಅಂದ್ರನು ಅದರ ಸೌಂದರ್ಯ ನೋಡ್ಕೊಂಡು, ಬಣ್ಣ ನೋಡ್ಕೊಂಡು, ಗಾತ್ರ ನೋಡ್ಕೊಂಡು ಅಂತ ಅರ್ಥ ಅಲ್ಲ ಹಾಗಾದ್ರೆ ಯಾರ್‍ದ್ದೊ ಮುಖ ನೋಡ್‌ಕೊಂಡು ನಾನ್ ಷೇರ್ ಆಹ್ಕತೀವಿ ಅಂದ್ರೆ ಏನ್ ಅರ್ಥ ಅಂತ ಕೇಳಿದ್ರೆ ಅವರ ಕ್ರೆಡಿಬಲಿಟಿ ನೋಡ್ಕೊಂಡು ಆಧಾರದ ಮೇಲೆ ನಾನು ಷೇರ್‌ಅನ್ನ ಹಾಕ್ತೀನಿ ಇವತ್ತು ಆತರ ಸಾವಿರಾರು ಸೊಸೈಟಿಗಳು ಇಡೀ ದೇಶದಲ್ಲಿ ನಡಿತಾ ಇದೆ ಅಂತಂದ್ರೆ ಹೇಳಿದ್ರೆ ನಾನಂದ್ಕೊತಿನಿ ಗೌರ್ಮೆಂಟ್ ಒಂದು ಏನ್ನಿ ಒಂದು ಬಾಡಿ, ಪ್ರೈವೇಟ್ ಒಂದು ಬಾಡಿ ಅಂತ ಆದ್ರೆ ಕೊ–ಆಪರೇಟೀವ್ ಸೊಸೈಟಿಗಳು ಇನ್ನೊಂದು ಬಹು ದೊಡ್ಡ ಬಾಡಿ ನಮ್ಮ ದೇಶದ ಆರ್ಥಿಕ ರಂಗದಲ್ಲಿ ಅಂತ ನಾನ್ ಅಂದ್ಕೊತೀನಿ.

ಅಂತ ಒಂದು ಯಶಸ್ವಿ ಸೊಸೈಟಿಯ ಡೈರೆಕ್ಟರ್‌ಗಳು, ಸಿಬ್ಬಂದಿ ವರ್ಗದವರುಗಳು ಮತ್ತು ಸದಸ್ಯರು ನಾವಿವತ್ತಿ ಇಲ್ಲಿ ಸಏರಿದಿವಿ, ನನಗೆ ಈ ಕಾರ್ಯಕ್ರಮ ನೋಡ್ತಾ ಇದ್ದಾಗ ಪ್ರತಿಭಾ ಪುರಸ್ಕಾರ ಮಾಡ್ತಾ ಇದ್ದಾಗ, ಹೊರಗಡೆ ಖುಷಿಯಿಂದ ಒಡಾಡ್ತಾ ಇದ್ದಂತ ಅನೆಕ ತಾಯಂದಿರು ಮಕ್ಕಳು ನೋಡ್ದಾಗ. ಇದೊಂದು ಆರ್ಥಿಕ ವ್ಯವಸ್ಥೆ, ಫೈನಾಷಿಯಲ್ ವ್ಯವಸ್ಥೆ. ಇಲ್ಲಿರುವ ಬಹುತೇಕ ತಾಯಂದಿರು ಮನೆ ಮಠ ಬಿಟ್ಟು ಬರಬೇಕು ಅಂತ ಏನಿಲ್ಲ ಏಕಂದ್ರೆ ಬರದಿದ್ರು ಕೂಡ ಜನರಲ್ ಬಾಡಿ ಮೀಟಿಂಗ್ ನಡೆಯುತ್ತೆ, ಬಿಲ್ ಪಾಸಾಗುತ್ತೆ ಯಾಕೆಂದ್ರೆ ಇದು ಹೇಗೆ ಪಾಸಾಗುತ್ತೆ ಅಂತ ನನಗ್‌ಗೊತ್ತು ಇದೊಂದು ಕುಟುಂಬ ಅಂದಕೊಂಡು ಬರ್ತಿವಿ, ಯಾಕೆ ನಾವೆಲ್ಲರೂ ಪರಿಚಯಸ್ತರೂ ಒಟ್ಟಾಗಬೇಕು ಅಂತ ಬರ್ತಿವಿ, ಒಂದು ವಿಶ್ವಾಸ ಇದೆ, ಒಂದು ಆನಂದ ಇದೆ, ಒಂದು ನಗು ಇದೆ ಎಲ್ಲು ಕೂಡ ಬೇಸರ ಇಲ್ಲ. ಇದು ಅಂತ ಕೇಳುದ್ರೆ ನಮ್ ಹಣ ಈ ಸೊಸೈಟಿಯಲ್ಲಿಟ್ಟಿದಿವಿ ಈ ಸೊಸೈಟಿ ನಮ್ ಹಣವನ್ನು ಚೆನ್ನಾಗಿ ಕಾಪಾಡುತ್ತೆ ಮಾತ್ರವಲ್ಲ ಬೆಳಸಕ್ಕು ಬಳಸುತ್ತೆ ಅನ್ನುವ ವಿಶ್ವಾಸ ನಮ್‌ಹತ್ರ ಇದೆ.

ಯಾರನ್ನ ನೋಡಿ ಈ ವಿಶ್ವಾಸ ಇದೆ, ಅದರ ಡೈರೆಕ್ಟರ್ಸ್‌ಗಳ ನೋಡಿ ವಿಶ್ವಾಸ ಇದೆ ನಮ್‌ಗೆ, ಅಲ್ಲಿರ್‌ತಕ್ಕಂತ ಸಿಬ್ಬಂದಿಗಳನ್ನ ನೋಡಿ ವಿಶ್ವಾಸ ಇದೆ ನಮ್‌ಗೆ, ಅವ್ರ ಪರ್‌ಫಾರಮ್ ಮಾಡೋದನ್ನ ನೋಡಿ ದುಡ್ ಇಟ್ಟಿದ್ವಾ ಅಂತ ಕೇಳುದ್ರೆ, ಪರ್‌ಫಾರಮ್ ಮಾಡೊದನ್ನ ನೋಡಿ ದುಡ್ ಇಟ್ಟಿರ್‌ಲಿಲ್ಲ ನಾವು ವಿಶ್ವಾಸ ನೋಡಿ ದುಡ್ ಇಟ್ಟಿದ್ದು.

ಒಂದು ಪುಟ್ಟದಾಗಿರ್ತಕ್ಕಂತ ಟೆಂಪ್ಲೆಟ್ ಎಸ್‌ಎಂಎಸ್ ಬರುತ್ತೆ ನೋಡಿರಬಹುದು ತಾವು ಅದನ್ನ ಅದರಲ್ಲಿ ವಿಶ್ವಾಸ ಅನ್ನೋದಕ್ಕು ಒಂದು ಸುಂದರವಾಗಿರ್ತಕ್ಕಂತ ಉದಾಹರಣೆ ಕೊಡ್ತಾರೆ. ತುಂಬಾ ಜನ ಮಕ್ಕಳನ್ನ ಆಡ್ಸಿದಿವಿ, ಮಕ್ಕಳನ್ನ ಆಡಿಸ್‌ಬೇಕಾದ್ರೆ ಯಾವುದೇ ಮಗುವಿನ ಜೀವನದಲ್ಲಿ ಒಂದು ಈ ತರದ ಆಟ ಯಾರಾದರೊಬ್ಬರು ಆಡುತ್ತಿರುತ್ತಾರೆ ಪುಟ್ಟ ಮಗುನ ಇಡ್‌ಕೊಂಡು ಮೇಲ್ಗಡೆ ಬಿಸಾಕಿ, ಕೆಳ್‌ಗಡೆ ಹಿಡಿತರೆ. ಇದನ್ನ ಇಲ್ಲಿರೊ ಎಲ್ಲರೂ ಅನುಭವಿಸಿದಿರಿ ಮತ್ತು ಬಹುತೇಕ ಜನ ಮಾಡಿದ್ದೀರಿ. ಆ ಮಗುವಿಗೆ ವಿಶ್ವಾಸವಿರುತ್ತದೆ. ತನ್ನನ್ನು ಎಸೆದವರು ಗಟ್ಟಿಯಾಗಿ ಹಿಡಿದುಕೊಂಡೇ ತೀರ್‍ತಾರೆ ಅಂತ. ನಾನು ಮಾತಾಡ್ತಿರೋದು ಆ ವಿಶ್ವಾಸದ ಬಗ್ಗೆ. ಕೋ–ಆಪರೇಟಿವ್ ಸೊಸೈಟಿ ಮೂಡಿಸಿರೋದು ಅಂಥಹುದೇ ವಿಶ್ವಾಸವನ್ನ. ನಾವು ದುಡ್ಡು ಹಾಕಿಬಿಟ್ಟಿದ್ದೇವೆ. ಅವ್ರು ಅದನ್ನು ಏನು ಮಾಡತಾರೆ ಅಂತ ಗೊತ್ತಿಲ್ಲ. ಅಲ್ಲಿನ ಹತ್ತು ಹನ್ನೆರಡು ಸಿಬ್ಬಂದಿ, ನೂರಾರು ಸಿಬ್ಬಂದಿಯ ಮಧ್ಯಾದಲ್ಲಿ ಆಮಗುವಿಗೆ ಹೇಗೆ ತನ್ನನ್ನು ಮೇಲೆಸದವರ ಕುರಿತು ವಿಶ್ವಾಸವಿದೇಯೋ ಅದೇ ರೀತಿಯ ವಿಶ್ವಾಸವನ್ನು ಶೇರುದಾರರು ಪಾವಗಡ ಕೋಆಪರೇಟಿವ್ ಸೊಸೈಟಿಯಲ್ಲಿದ್ದಾರೆ ಅಂತ ಅಂದುಕೊಂಡಿದ್ದೀನಿ. ಈ 10 ವರ್ಷಗಳಲ್ಲಿ ಈ ಸೊಸೈಟಿ ಅವರು ಅದನ್ನು ಉಳಿಸಿಕೊಂಡಿದ್ದಾರೆ.

ಈ ಸೊಸೈಟಿಯಲ್ಲಿ ವಿಶ್ವಾಸ ಇಟ್ಟವರಿಗೂ, ವಿಶ್ವಾಸ ಉಳಿಸಿಕೊಂಡವರಿಗೂ ನನ್ನ ಅಭಿನಂದನೆ. ಈ ರೀತಿ ವಿಶ್ವಾಸದ ಹಲವಾರು ಉದಾಹರಣೆಗಳಿದ್ದಾವೆ ನಮ್ಮ ದೇಶದಲ್ಲಿ. ನಮ್ಮ ದೇಶ ಒಂದು ವಿಚಿತ್ರವಾದ ದೇಶ. ಇಂದಿನ ಅನೇಕ ಆಧುನಿಕ ನಂಬಿಕೆಗಳು ನಮ್ಮ ದೇಶದ್ದೇ ಬೇರೆ ದಾರಿ. ಜಗತ್ತಿನಲ್ಲಿ ಬೇರೆಲ್ಲೂ ಇಲ್ದೇಇರೋಂತಹ ದಾರಿ ಅದು. ವಿಶೇಷವಾದ ದಾರಿ. ಇಲ್ಲಿ ಯಾವುದೋ ಸರ್ಕಾರ, ಪ್ರೈವೇಟ್ ವ್ಯವಸ್ಥೆ ಅಥವಾ ಕ್ಯಾಪಿಟಲಿಸಂ ನಮ್ಮ ದೇಶವನ್ನು ಉಳುಸುತ್ತಾ, ಸಾಕುತ್ತಾ ಅಂತಂದ್ರೆ, ಅವ್ಯಾವುದೂ ನಮ್ಮ ದೇಶವನ್ನು ಉಳಿಸಿಲ್ಲ.

ಹಾಗಾದ್ರೆ ನಮ್ಮ ದೇಶವನ್ನು ಉಳಿಸಿದ್ದು, ಬೆಳೆಸಿದ್ದು, ಕಾಪಾಡಿಕೊಂಡು ಬಂದದ್ದು ಯಾವುದು ಅಂತ ಕೇಳಿದ್ದೆ, ಇಂಥ ಸಾಮಾಜಿಕ ವ್ಯವಸ್ಥೆಗಳೇ ನಮ್ಮ ದೇಶವನ್ನು ಉಳಿಸಿ ಬೆಳೆಸುತ್ತಾ ಬಂದಿರುವುದು. ಕೋ– ಆಪರೇಟಿವ್ ಸೊಸೈಟಿ ಯಾವ ದೇಶದಲ್ಲಿ ಶುರುವಾದ್ರೂ, ಎಷ್ಟು ಶತಮಾನದ ಹಿಂದಾದ್ರೂ ಶುರುವಾಗಿರಲಿ, ಅದು ಭಾರತದಲ್ಲಿ ತುಂಬ ಚೆನ್ನಾಗಿ ನೆಲೆಯೂರಿದೆ. ಡೀಫಾಲ್ಟ್, ಮೊದಲಾದ ಪದಗಳ ಬಳಕೆಯನ್ನು ಇಲ್ಲಿ ಕೇಳಿದೆ. ನನಗನಿಸುವ ಮಟ್ಟಿಗೆ ಅದು ಬರೇ aberration. ಶೇ.10 ರಷ್ಟು ಸೊಸೈಟಿಗಳು ಮಾತ್ರ ನಮ್ಮಲ್ಲಿ ಕಣ್ಣುಮುಚ್ಚಿಕೊಂಡಿವೆ. ಇದಕ್ಕೆ ಕಾರಣಗಳು ಬೇಕಾದಷ್ಟಿದೆ. ■

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001
Pages 20

...14ನೇ ಪುಟದಿಂದ

# 2012 - ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷಕ್ಕೊಂದು ವೆಬ್‌ತಾಣ

2012ರ ವರ್ಷಾಚರಣೆಯಲ್ಲಿ ಹೊರತರಲಾಗುತ್ತಿದ್ದು ಇದರಲ್ಲಿ 100 ಸಾಹಸ ಗಾಥೆಗಳನ್ನು ಅಳವಡಿಸಲಾಗುತ್ತಿದೆ. ಕೆಲ ಸಾಹಸಗಾಥೆಗಳ ವಿವರಗಳನ್ನು ಹಾಗೂ ವಿಡಿಯೋಗಳನ್ನು ಇಲ್ಲಿ ನೋಡಬಹುದು.

- 2012ರ ಸಹಕಾರಿಗಳ ವರ್ಷಾಚರಣೆಯಲ್ಲಿ ನಮ್ಮ ಪಾತ್ರವೇನು, ಹೇಗೆ ಆಚರಿಸಬಹುದು, ಕಾರ್ಯಕ್ರಮಗಳನ್ನು ಸಂಘಟಿಸುವ ಬಗ್ಗೆ ಈ ತಾಣದಲ್ಲಿ ಮಾಹಿತಿ ಪಡೆಯಬಹುದು. ಅಲ್ಲದೇ, ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರೇರಣೆದಾಯಕ ಮಾಹಿತಿಗಳನ್ನು, ಅಧ್ಯಯನಗಳನ್ನು ಇಲ್ಲಿ ನೋಡುವುದರ ಜೊತೆಗೆ ನಮಗೆ ತಿಳಿದ ಮಾಹಿತಿಗಳಿದ್ದಲ್ಲಿ ಐಸಿಎ ಗಮನಕ್ಕೆ ತರುವ ಮೂಲಕ ಹಂಚಿಕೊಳ್ಳುವ ಸಾಧ್ಯತೆಯನ್ನು ಒದಗಿಸಲಾಗಿದೆ.
- ICA (International Co-operative Alliance) ಇದರ ಮುಂದಿನ ಯೋಜನೆಗಳು, ಇದರ ಸದಸ್ಯರ ವಿವರಗಳು, ಸದಸ್ಯತ್ವ ಪಡೆಯುವ ವಿಧಾನ, ಸಾಮಾನ್ಯ ಸಭೆಯ ವಿವರಗಳನ್ನು ತಿಳಿದು ಕೊಳ್ಳಬಹುದು. ಅಲ್ಲದೆ, ವಿಶ್ವದ ಸಹಕಾರ ಕ್ಷೇತ್ರದ ಅಂಕಿ ಅಂಶಗಳ ಬಗ್ಗೆ ಕೂಡ ಮಾಹಿತಿಯನ್ನು ಪಡೆಯಬಹುದಾಗಿದೆ.

ಈ ವೆಬ್‌ತಾಣವನ್ನು ವಿಶ್ವದ ಬೇರೆ ಬೇರೆ ಭಾಷೆಯಲ್ಲಿ ನೋಡುವ ಅವಕಾಶವನ್ನು ಒದಗಿಸಲಾಗಿದೆ, ಭಾರತೀಯ ಭಾಷೆಗಳಲ್ಲಿ ಹಿಂದಿಯನ್ನು ಅಳವಡಿಸಲಾಗಿದೆ. ಮುಂದುವರೆದ ರಾಷ್ಟ್ರಗಳ ಹಾಗೂ ಯೂರೋಪ್, ಅಮೇರಿಕ ದೇಶಗಳ ಸಹಕಾರ ಕ್ಷೇತ್ರಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ.

ವಿಶ್ವದ ಅತಿದೊಡ್ಡ ಸಹಕಾರ ಕ್ಷೇತ್ರ ಹೊಂದಿರುವ ಭಾರತದ ಸಹಕಾರ ಕ್ಷೇತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿರುವುದು ಈ ತಾಣದ ಕೊರತೆ. ಆಧುನಿಕ ಹಾಗೂ ಅಂತರ್ಜಾಲ ಮಾಧ್ಯಮವನ್ನ ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲಿ ಭಾರತೀಯ ಸಹಕಾರ ಕ್ಷೇತ್ರ ಹಿಂದುಳಿದಿರುವುದು ಇದಕ್ಕೆ ಕಾರಣವಾಗಿರಬಹುದು.

ಅಂತಾರಾಷ್ಟ್ರೀಯ ಸಹಕಾರಿಗಳ ವರ್ಷದ ಈ ಸಂದರ್ಭದಲ್ಲಿ ನಮ್ಮ ರಾಜ್ಯದ, ದೇಶದ ಸಹಕಾರ ಕ್ಷೇತ್ರವನ್ನು, ಸಹಕಾರದ ಸಾಧನೆಗಳನ್ನು ಜಾಗತಿಕ ಗುರುತಿಸುವಿಕೆಯೆಡೆಗೆ ಒಯ್ಯುವಂತಹ ಪ್ರಯತ್ನ ಕರ್ನಾಟಕದ ಸಹಕಾರ ಕ್ಷೇತ್ರದಿಂದ ಅದರಲ್ಲೂ ಮುಖ್ಯವಾಗಿ ಸೌಹಾರ್ದ ಸಹಕಾರಿಗಳಿಂದ ಆಗಲಿ ಎನ್ನುವ ಆಶಯ ನಮ್ಮದು. ■

## ನವೆಂಬರ್ 14 ರಿಂದ 20ರವರೆಗೆ 59ನೇ ಅಖಿಲ ಭಾರತ ಸಹಕಾರ ಸಪ್ತಾಹ

**ಸಪ್ತಾಹದ ಧ್ಯೇಯ : "ಸಹಕಾರ ಉದ್ದಿಮೆಗಳು ಅತ್ಯುತ್ತಮ ಜಗತ್ತನ್ನು ನಿರ್ಮಿಸುತ್ತವೆ."**
(Co-operative Enterprises build a better world")

| ದಿನಾಂಕ | ವಿಷಯಗಳು |
|---|---|
| 14.11.2012 | ನೇರ ತೆರಿಗೆ ಸಂಹಿತೆ ವಿಧೇಯಕವೂ ಸೇರಿಕೊಂಡಂತೆ ಸಹಕಾರ ಸಂಸ್ಥೆಗಳಗೆ ಅಧಿಕಾರ ನೀಡುವ ಕಾನೂನುಗಳ ರಚನಾ ದಿನ. |
| 15.11.2012 | ಸಹಕಾರ ಸಂಸ್ಥೆಗಳ ಮೂಲಕ ಸರ್ವರನ್ನೊಳಗೊಂಡ ನ್ಯಾಯ ಸಮ್ಮತವಾದ ದಿನ. |
| 16.11.2012 | ಸಹಕಾರ ಸಂಸ್ಥೆಗಳಲ್ಲಿ ಮೌಲ್ಯವರ್ಧನೆ ಬಲಪಡಿಸುವ ಮತ್ತು ಪ್ರೋತ್ಸಾಹಿಸುವ ದಿನ. |
| 17.11.212 | ಕುಡಿಯುವ ನೀರಿನ ಸರಬರಾಜು ಒಳಗೊಂಡಂತೆ ಹೊಸ ಕ್ಷೇತ್ರಗಳಲದಲಿ ಸಹಕಾರ ಸಂಸ್ಥೆಗಳನ್ನು ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವ ದಿನ. |
| 18.11.2012 | ಸಹಕಾರ ಸಂಸ್ಥೆಗಳಲ್ಲಿ ವೃತ್ತಿಪರತೆ ದಿನ. |
| 19.11.2012 | ಸಹಕಾರ ಸಂಘಗಳು ಮತ್ತು ಉದ್ಯಮಶಿಲತಾ ದಿನ. |
| 20.11.2012 | ಸಹಕಾರ ಸಂಸ್ಥೆಗಳ ಮೂಲಕ ಮಹಿಳೆಯರು ಮತ್ತು ಅಶಕ್ತರನ್ನು ಅಧಿಕಾರಯುತರನ್ನಾಗಿ ಮಾಡುವುದು. |

**Leader of Leaders - KarnataKa state souharda federaL Co-op-Ltd BangaLore**

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಕಾನೂನು ವಿಭಾಗದ ಅಧಿಕಾರಿ | ಶ್ರೀ ಶ್ರೀಕಾಂತ | 9916814888 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಇವರಿಂದ ಪ್ರಕಟಿತ :
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop,
E-mail : souharada@souharada.coop,
ದೂ.ಸಂ : 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜೆ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ನಂ. ಡಿ–02, 1ನೇ ಮಹಡಿ, ಶ್ರೀ ಗಜಾನನ ಫ್ಲಾವರ್ ವ್ಯಾಲಿ, ಗುಡ್–ಲಕ್ ಹೋಟೆಲ್ ಎದುರು, ಖೂಭಾ ಪ್ಲಾಟ್, ಗುಲಬರ್ಗಾ– 585103. ದೂ;08472–270222, ಮೊ : 9900990268